Volume : 9 | Issue : 139 | August : 15 : 2026 : Saturday
ಸಂಪುಟ : 9 | ಸಂಚಿಕೆ : 139 | ಆಗಸ್ಟ್ : 15 : 2026 : ಶನಿವಾರ
www.VIKRAMAVAHINI.com
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

ಸರ್ವರಿಗೂ ಸ್ವಾತಂತ್ರ್ಯ ದಿನದ ಶುಭಾಷಯಗಳು



# ವಿಕ್ರಮ ವಾಹಿನಿ

ಪುಟ 4 ₹2 || ಕನ್ನಡ ದಿನಪತ್ರಿಕೆ ||
VIKRAMA VAHINI
PRGI NO: KARKAN/2018/78481



ರಶ್ಮಿಕಾ, ಶಾಹಿದ್ ಕಪೂರ್ ಹಾಗೂ ಕೃತಿ ಸನನ್ ನಟನೆಯ 'ಕಾಕ್‌ಟೇಲ್ 2' ಆಗಸ್ಟ್ 14ರಿಂದ ನೆಟ್‌ಫ್ಲಿಕ್ಸ್‌ನಲ್ಲಿ ಲಭ್ಯ. ಚಿತ್ರಮಂದಿರಗಳಲ್ಲಿ ಮಿಶ್ರ ಪ್ರತಿಕ್ರಿಯೆ ಪಡೆದಿದ್ದ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿತ್ತು.

ಅಂಡಮಾನ್‌ನ ಸಮುದ್ರದಲ್ಲಿ ಅತಿ ದೊಡ್ಡ ತ್ರಿವರ್ಣ ಧ್ವಜ ಅನಾವರಣ | ಪುಟ 4

ಸ್ವಾತಂತ್ರ್ಯದ ಹಾದಿಯಲ್ಲಿ ತ್ಯಾಗ-ಬಲಿದಾನ | ಪುಟ 3

■ ಸುದ್ದಿ ಚುಟುಕು

## ಗುಟ್ಕಾ ನಿಷೇಧ ಆದೇಶ ಹಿಂಪಡೆಯಲು ಸಿಎಂ ಸೂಚನೆ



● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕದಲ್ಲಿ ಗುಟ್ಕಾ ಮಾರಾಟ ನಿಷೇಧಕ್ಕೆ ಸಂಬಂಧಿಸಿದ ಆದೇಶವನ್ನು ಶೀಘ್ರದಲ್ಲೇ ಹಿಂಪಡೆಯುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ. ನಿಷೇಧದ ವಿರುದ್ಧ ಹಲವು ಶಾಸಕರು, ಅದರಲ್ಲೂ ಕಾಂಗ್ರೆಸ್ ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಗುಟ್ಕಾ ನಿಷೇಧದಿಂದ ಅಡಿಕೆ ಬೆಳೆಗಾರರಿಗೆ ತೊಂದರೆಯಾಗಲಿದೆ ಎಂದು ಹಿರಿಯ ಶಾಸಕರು ಸಿಎಂಗೆ ಮನವಿ ಸಲ್ಲಿಸಿದ್ದರು. ಆದೇಶದ ಬಗ್ಗೆ ತಮ್ಮ ಗಮನಕ್ಕೆ ಬಂದಿರಲಿಲ್ಲ ಎಂದು ಸಿಎಂ ಸ್ಪಷ್ಟಪಡಿಸಿದ್ದರು. ಬಳಿಕ ನಡೆದ ಸಚಿವ ಸಂಪುಟ ಸಭೆಯಲ್ಲೂ ಈ ವಿಚಾರ ಚರ್ಚೆಗೆ ಬಂದಿದೆ.

ತಮ್ಮ ಗಮನಕ್ಕೆ ತರದೆ ಇಂತಹ ಮಹತ್ವದ ಆದೇಶ ಹೊರಡಿಸಿದ್ದಕ್ಕೆ ಆರೋಗ್ಯ ಇಲಾಖೆ ಕಾರ್ಯದರ್ಶಿಯನ್ನು ಸಿಎಂ ತರಾಟೆಗೆ ತೆಗೆದುಕೊಂಡರು. ಸುಮಾರು ಏಳೆಂಟು ಜಿಲ್ಲೆಗಳ ಅಡಿಕೆ ಬೆಳೆಗಾರರ ಮೇಲೆ ನಿಷೇಧದ ಪರಿಣಾಮ ಬೀರುವ ಸಾಧ್ಯತೆ ಹಿನ್ನೆಲೆಯಲ್ಲಿ ಆದೇಶವನ್ನು ವಾಪಸ್ ಪಡೆಯುವಂತೆ ಸೂಚಿಸಲಾಗಿದೆ. ಈ ಕುರಿತು ಇಂದೇ ಅಥವಾ ನಾಳೆ ಅಧಿಕೃತ ಆದೇಶ ಹೊರಬೀಳುವ ಸಾಧ್ಯತೆ ಇದೆ.

ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ನಿಷೇಧ ಆದೇಶವನ್ನು ಮರುಪರಿಶೀಲಿಸುವಂತೆ ಶಾಸಕರು ಒತ್ತಾಯಿಸಿದ್ದಾರೆ. ಗುಟ್ಕಾ ನಿಷೇಧದಿಂದ ಅಡಿಕೆ ಬೇಡಿಕೆ ಹಾಗೂ ಬೆಲೆ ಮೇಲೆ ಪರಿಣಾಮ ಬೀರುವ ಆತಂಕ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರ ಆದೇಶ ಹಿಂಪಡೆಯಲು ಮುಂದಾಗಿದೆ.

## ವಿಮಾನ ರದ್ದು; ಕೈಗೆ ಸಿಕ್ಕಿದ್ದನ್ನು ಎಸೆದು ಮಹಿಳೆ ರಂಪಾಟ



● ವಿಕ್ರಮ ವಾಹಿನಿ । ಭುವನೇಶ್ವರ

ಇಂಡಿಗೋ ವಿಮಾನ ರದ್ದಾದ ಹಿನ್ನೆಲೆಯಲ್ಲಿ ಕೋಪಗೊಂಡ ಮಹಿಳಾ ಪ್ರಯಾಣಿಕರೊಬ್ಬರು ಭುವನೇಶ್ವರ ವಿಮಾನ ನಿಲ್ದಾಣದಲ್ಲಿ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿ, ಕಂಪ್ಯೂಟರ್ ಕೀಬೋರ್ಡ್, ಮಾನಿಟರ್ ಸೇರಿದಂತೆ ಹಲವು ವಸ್ತುಗಳನ್ನು ಎಸೆದು ಹಾನಿ ಮಾಡಿದ್ದಾರೆ. ಆಗಸ್ಟ್ 13ರಂದು ಘಟನೆ ನಡೆದಿದ್ದು, ಸುಮಾರು 49,000 ಮೌಲ್ಯದ ವಸ್ತುಗಳಿಗೆ ಹಾನಿಯಾಗಿದೆ ಎಂದು ಆರೋಪಿಸಲಾಗಿದೆ.

ತಾಂತ್ರಿಕ ದೋಷದ ಹಿನ್ನೆಲೆಯಲ್ಲಿ ಭುವನೇಶ್ವರ–ಕೋಲ್ಕತ್ತಾ ಇಂಡಿಗೋ ವಿಮಾನ 6ಇ 7352 ರದ್ದಾಗಿತ್ತು. ಬಳಿಕ ಅಶಿಸ್ತಿನ ವರ್ತನೆ ತೋರಿದ ಮಹಿಳೆಯನ್ನು ಭದ್ರತಾ ಸಿಬ್ಬಂದಿಗೆ ಒಪ್ಪಿಸಲಾಗಿದ್ದು, ಅಧಿಕಾರಿಗಳು ಪೊಲೀಸರಿಗೆ ದೂರು ನೀಡಿದ್ದಾರೆ.

ವಿಮಾನ ರದ್ದಾಗಿರುವ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡಿದ ಬಳಿಕವೂ ಮಹಿಳೆ ಆಕ್ರೋಶ ವ್ಯಕ್ತಪಡಿಸಿ ಸಿಬ್ಬಂದಿಯೊಂದಿಗೆ ತೀವ್ರ ವಾಗ್ವಾದ ನಡೆಸಿದ್ದಾರೆ. ಬಳಿಕ ಕೈಗೆ ಸಿಕ್ಕ ವಸ್ತುಗಳನ್ನು ಎಸೆದು ವಿಮಾನ ನಿಲ್ದಾಣದ ಆಸ್ತಿಗೆ ಹಾನಿ ಮಾಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಇಂಡಿಗೋ ಪ್ರಕಾರ, ವಿಮಾನ ಹಾರಾಟಕ್ಕೂ ಮುನ್ನ ತಪಾಸಣೆ ವೇಳೆ ತಾಂತ್ರಿಕ ದೋಷ ಪತ್ತೆಯಾದ ಕಾರಣ ವಿಮಾನವನ್ನು ರದ್ದುಗೊಳಿಸಲಾಗಿತ್ತು. ಪ್ರಯಾಣಿಕರ ಸುರಕ್ಷತೆಯೇ ಸಂಸ್ಥೆಯ ಪ್ರಮುಖ ಆದ್ಯತೆಯಾಗಿದ್ದು, ಘಟನೆಗೆ ಸಂಬಂಧಿಸಿದಂತೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಂಡಿಗೋ ತಿಳಿಸಿದೆ.



80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಕ್ಕೆ ದೇಶ ಸಜ್ಜಾಗುತ್ತಿರುವ ಹಿನ್ನೆಲೆಯಲ್ಲಿ ಮುಂಬೈನ ಐತಿಹಾಸಿಕ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ (ಸಿಎಸ್‌ಎಂಟಿ) ತ್ರಿವರ್ಣದ ಬೆಳಕಿನಲ್ಲಿ ಕಂಗೊಳಿಸಿತು. ವಿಕ್ಟೋರಿಯನ್ ಗೋಥಿಕ್ ವಾಸ್ತುಶೈಲಿ ಹಾಗೂ ಸಾಂಪ್ರದಾಯಿಕ ಭಾರತೀಯ ವಾಸ್ತುಶೈಲಿಯ ಸಮ್ಮಿಶ್ರಣಕ್ಕೆ ಹೆಸರಾದ ಸಿಎಸ್‌ಎಂಟಿ ಯುನೆಸ್ಕೋ ವಿಶ್ವ ಪಾರಂಪರಿಕ ತಾಣವಾಗಿದ್ದು, ಸ್ವಾತಂತ್ರ್ಯೋತ್ಸವದ ಮುನ್ನ ರಾಷ್ಟ್ರಭಕ್ತಿಯ ಸಂಭ್ರಮಕ್ಕೆ ವಿಶೇಷ ಮೆರುಗು ನೀಡಿತು.

# ವಿಭಜನೆಯ ಭೀಕರತೆ ನೆನೆದ ರಾಷ್ಟ್ರಪತಿ

● ವಿಕ್ರಮ ವಾಹಿನಿ । ನವದೆಹಲಿ

80ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ದೇಶ ವಿಭಜನೆಯ ವೇಳೆ ಕೋಮು ಹಿಂಸಾಚಾರ ಹಾಗೂ ಸ್ಥಳಾಂತರದ ದುರಂತಕ್ಕೆ ಒಳಗಾದ ಲಕ್ಷಾಂತರ ಜನರನ್ನು ಸ್ಮರಿಸಿದರು. ಭೀಕರ ಪರಿಸ್ಥಿತಿಯ ನಡುವೆಯೂ ಅವರು ತಮ್ಮ ಗುರುತು ಮತ್ತು ಅಸ್ಮಿತೆಯನ್ನು ಬಿಟ್ಟುಕೊಡಲಿಲ್ಲ ಎಂದು ಹೇಳಿದರು.

ಆಗಸ್ಟ್ 14ರಂದು ಆಚರಿಸಲಾಗುವ 'ವಿಭಜನ್ ವಿಭೀಷಿಕಾ ಸ್ಮೃತಿ ದಿವಸ್' ಹಿನ್ನೆಲೆಯಲ್ಲಿ ವಿಭಜನೆಯ ಸಂದರ್ಭದಲ್ಲಿ ಜೀವ ಕಳೆದುಕೊಂಡವರು ಹಾಗೂ ನಿರಾಶ್ರಿತರಾದವರಿಗೆ ರಾಷ್ಟ್ರಪತಿ ಗೌರವ ಸಲ್ಲಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ವಿಭಿನ್ನ ಸಿದ್ಧಾಂತಗಳನ್ನು ಹೊಂದಿದ್ದ ಭಾರತೀಯರು ಒಂದೇ ಗುರಿಗಾಗಿ ಒಗ್ಗಟ್ಟಿನಿಂದ ಹೋರಾಡಿದರು.

ಸರ್ದಾರ್ ಪಟೇಲ್ ಕೊಡುಗೆ ಸ್ಮರಣೆ: ಸ್ವಾತಂತ್ರ್ಯದ ಸಂದರ್ಭದಲ್ಲಿ 550ಕ್ಕೂ ಹೆಚ್ಚು ರಾಜಪ್ರಭುತ್ವದ ಸಂಸ್ಥಾನಗಳನ್ನು ನೂತನ ಭಾರತದೊಂದಿಗೆ ವಿಲೀನಗೊಳಿಸುವುದು ದೊಡ್ಡ ಸವಾಲಾಗಿತ್ತು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಈ ಮಹತ್ವದ ಕಾರ್ಯವನ್ನು ಯಶಸ್ವಿಯಾಗಿ ಮುನ್ನಡೆಸಿ, ಆಧುನಿಕ ಭಾರತದ ಏಕತೆಗೆ ಭದ್ರ ಅಡಿಪಾಯ ಹಾಕಿದರು ಎಂದು ಮುರ್ಮು ಸ್ಮರಿಸಿದರು.

2047ರ ವೇಳೆಗೆ ವಿಕಸಿತ ಭಾರತ ನಿರ್ಮಿಸುವ ಗುರಿಯೊಂದಿಗೆ ದೇಶ ಮುನ್ನಡೆಯುತ್ತಿದೆ. ಅಭಿವೃದ್ಧಿಯ ಫಲಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಮಾಡುವ ಸಂಕಲ್ಪದೊಂದಿಗೆ, ಭಾರತದ ಶ್ರೀಮಂತ ಪರಂಪರೆ ಹಾಗೂ ಸ್ವಾತಂತ್ರ್ಯ ಚಳವಳಿಯ ಆದರ್ಶಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯ ಹಾದಿಯಲ್ಲಿ ಸಾಗಬೇಕು ಎಂದು ರಾಷ್ಟ್ರಪತಿ ಕರೆ ನೀಡಿದರು.



## 9 ಯೋಧರಿಗೆ ಕೀರ್ತಿ ಚಕ್ರ

● ವಿಕ್ರಮ ವಾಹಿನಿ । ನವದೆಹಲಿ

80ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಶಸ್ತ್ರ ಪಡೆಗಳು ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಿಬ್ಬಂದಿಗೆ ಒಟ್ಟು 78 ಶೌರ್ಯ ಪ್ರಶಸ್ತಿಗಳಿಗೆ ಅನುಮೋದನೆ ನೀಡಿದ್ದಾರೆ. ಇದರಲ್ಲಿ 13 ಮರಣೋತ್ತರ ಪ್ರಶಸ್ತಿಗಳೂ ಸೇರಿವೆ.

ಪ್ರಶಸ್ತಿಗಳಲ್ಲಿ 9 ಕೀರ್ತಿ ಚಕ್ರ, 19 ಶೌರ್ಯ ಚಕ್ರ, 5 ಬಾರ್ ಟು ಸೇನಾ ಪದಕ ಹಾಗೂ 36 ಸೇನಾ ಪದಕಗಳು ಸೇರಿವೆ. ಜತೆಗೆ 3 ನೌಕಾ ಸೇನಾ ಪದಕ ಮತ್ತು 5 ವಾಯು ಸೇನಾ ಪದಕಗಳನ್ನೂ ಘೋಷಿಸಲಾಗಿದೆ. ಈ ಬಾರಿ ಶಾಂತಿಕಾಲದ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ ಅಶೋಕ ಚಕ್ರ ಯಾರಿಗೂ ಲಭಿಸಿಲ್ಲ. ಭಾರತೀಯ ಸೇನೆಯ ವಿಶೇಷ ಪಡೆಗಳ ಮೂವರು ಯೋಧರಿಗೆ ಕೀರ್ತಿ ಚಕ್ರ ಲಭಿಸಿದೆ. ಲೆಫ್ಟಿನೆಂಟ್ ಕರ್ನಲ್ ಮನೆವೋ ಫ್ರಾನ್ಸಿಸ್ ಪಿಎಫ್, ಮೇಜರ್ ಜಿತೇಂದ್ರ ರಾಠಿ ಹಾಗೂ ಮರಣೋತ್ತರವಾಗಿ ಹವಿಲ್ದಾರ್ ಗಜೇಂದ್ರ ಸಿಂಗ್ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಮರಣೋತ್ತರ ಸೇನಾ ಪದಕಗಳ ಪೈಕಿ ನಾಲ್ಕು 19 ರಾಷ್ಟ್ರೀಯ ರೈಫಲ್ಸ್ ಘಟಕದ ಯೋಧರಿಗೆ ಲಭಿಸಿವೆ. ಜಮ್ಮು–ಕಾಶ್ಮೀರದ 'ಆಪರೇಷನ್ ರಕ್ಷಕ್', ಈಶಾನ್ಯ ಭಾರತದ 'ಆಪರೇಷನ್ ಹಿಫಾಜತ್' ಮತ್ತು 'ಆಪರೇಷನ್ ಆರ್ಕಿಡ್', ಪೂರ್ವ ಲಡಾಖ್‌ನ 'ಆಪರೇಷನ್ ಸ್ನೋ ಲೆಪರ್ಡ್' ಹಾಗೂ ಸಿಯಾಚಿನ್‌ನ 'ಆಪರೇಷನ್ ಮೇಘದೂತ್'



ಕಾರ್ಯಾಚರಣೆಗಳಲ್ಲಿ ಸಲ್ಲಿಸಿದ ಶೌರ್ಯಕ್ಕಾಗಿ ಹಲವು ಪ್ರಶಸ್ತಿಗಳನ್ನು ನೀಡಲಾಗಿದೆ. ಇದಲ್ಲದೆ, 75 ಸೇನಾ, 10 ವಾಯುಪಡೆ ಹಾಗೂ 4 ನೌಕಾಪಡೆ ಸಿಬ್ಬಂದಿ ಸೇರಿದಂತೆ 89 'ಮೆನ್ಷನ್–ಇನ್–ಡಿಸ್ಪ್ಯಾಚಸ್' ಪ್ರಶಸ್ತಿಗಳಿಗೂ ರಾಷ್ಟ್ರಪತಿಗಳು ಅನುಮೋದನೆ ನೀಡಿದ್ದಾರೆ. ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ಕಮಾಂಡರ್ ಶಿವಂ ಕುಮಾರ್ ಅವರಿಗೆ ಶೌರ್ಯ ಚಕ್ರ ಲಭಿಸಿದೆ. ಕಮಾಂಡರ್‌ಗಳಾದ ವಿನೀತ್ ಶರ್ಮಾ, ಯುವರಾಜ್ ಕುಮಾರ್ ಹಾಗೂ ಪೆಟ್ಟಿ ಆಫೀಸರ್ ಸಿ. ಅವಿನಾಶ್ ಅಣ್ಣಾಸೊ ಅವರಿಗೆ ನೌಕಾ ಸೇನಾ ಪದಕಗಳನ್ನು ಘೋಷಿಸಲಾಗಿದೆ. ವಾಯುಪಡೆಯ ಸ್ಕ್ವಾಡ್ರನ್ ಲೀಡರ್ ಸುಧೀರ್ ಕುಮಾರ್ ಶೌರ್ಯ ಚಕ್ರಕ್ಕೆ ಆಯ್ಕೆಯಾಗಿದ್ದು, ಐವರು ಅಧಿಕಾರಿಗಳಿಗೆ ವಾಯು ಸೇನಾ ಪದಕ ಲಭಿಸಿದೆ.

44 ಅಸ್ಸಾಂ ರೈಫಲ್ಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ರಜಪೂತಾನಾ ರೈಫಲ್ಸ್‌ನ ಮೇಜರ್ ಆದಿತ್ಯ ಪ್ರತಾಪ್ ಸಿಂಗ್ ಅವರಿಗೆ 'ಬಾರ್ ಟು ಶೌರ್ಯ ಚಕ್ರ' ನೀಡಿ ಗೌರವಿಸಲಾಗಿದೆ. ಅವರು ಈ ಹಿಂದೆ ಶೌರ್ಯ ಚಕ್ರ ಹಾಗೂ ಸೇನಾ ಪದಕ ಪಡೆದಿದ್ದರು. ಇದೇ ವೇಳೆ 9 ರಾಷ್ಟ್ರೀಯ ರೈಫಲ್ಸ್‌ನ ಲ್ಯಾನ್ಸ್ ನಾಯಕ್ ನರೇಂದರ್ ಸಿಂಧು ಅವರಿಗೆ ಮರಣೋತ್ತರವಾಗಿ ಶೌರ್ಯ ಚಕ್ರ ನೀಡಲಾಗಿದೆ.

## ಸ್ಪೀಕರ್ ಆಗಿ ಜಿ.ಎಸ್. ಪಾಟೀಲ್; ಸಭಾಪತಿಯಾಗಿ ಸಲೀಂ



● ವಿಕ್ರಮ ವಾಹಿನಿ । ಬೆಂಗಳೂರು

ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ನೂತನ ಪೀಠಾಸೀನಾಧಿಕಾರಿಗಳ ಆಯ್ಕೆ ಶುಕ್ರವಾರ ನಡೆಯಿತು. ರೋಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಿ.ಎಸ್. ಪಾಟೀಲ್ ಅವರು ವಿಧಾನಸಭೆಯ ಸ್ಪೀಕರ್ ಆಗಿ ಅವಿರೋಧವಾಗಿ ಆಯ್ಕೆಯಾದರೆ, ಕಾಂಗ್ರೆಸ್‌ನ ಸಲೀಂ ಅಹಮದ್ ಅವರು ವಿಧಾನ ಪರಿಷತ್ತಿನ ಸಭಾಪತಿಯಾಗಿ ಆಯ್ಕೆಯಾದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಿ.ಎಸ್. ಪಾಟೀಲ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು, ಆಡಳಿತ ಪಕ್ಷದ ಸದಸ್ಯರು ಬೆಂಬಲಿಸಿದರು. ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಚುನಾವಣೆಯಿಂದ ದೂರ ಉಳಿದ ಹಿನ್ನೆಲೆಯಲ್ಲಿ ಪಾಟೀಲ್ ಅವಿರೋಧ ಆಯ್ಕೆಯಾದರು. ಬಳಿಕ ಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಅವರನ್ನು ಸ್ಪೀಕರ್ ಪೀಠಕ್ಕೆ ಕರೆತಂದರು.

ಇದೇ ವೇಳೆ, ಬಸವರಾಜ ಹೊರಟ್ಟಿ ರಾಜೀನಾಮೆಯಿಂದ ತೆರವಾಗಿದ್ದ ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಲೀಂ ಅಹಮದ್ ಅವರು ಎನ್‌ಡಿಎ ಅಭ್ಯರ್ಥಿ ಪಿ.ಎಚ್. ಪೂಜಾರ್ ಅವರನ್ನು ಸೋಲಿಸಿದರು. ಪರಿಷತ್ತಿನಲ್ಲಿ ಕಾಂಗ್ರೆಸ್‌ಗೆ 39 ಸದಸ್ಯರ ಸಂಖ್ಯಾಬಲವಿದ್ದು, ಬಿಜೆಪಿ 24 ಹಾಗೂ ಜೆಡಿಎಸ್ 6 ಸದಸ್ಯರನ್ನು ಹೊಂದಿವೆ.

ಯು.ಟಿ. ಖಾದರ್ ಅವರಿಗೆ ಸಚಿವ ಸ್ಥಾನ ನೀಡಿದ ಹಿನ್ನೆಲೆಯಲ್ಲಿ ವಿಧಾನಸಭೆ ಸ್ಪೀಕರ್ ಸ್ಥಾನ ತೆರವಾಗಿತ್ತು. ಇದೀಗ ಉಭಯ ಸದನಗಳ ಅಧ್ಯಕ್ಷ ಸ್ಥಾನಗಳು ಕಾಂಗ್ರೆಸ್ ಪಾಲಾಗಿದ್ದು, ಉಪಸಭಾಧ್ಯಕ್ಷ ಹಾಗೂ ಉಪಸಭಾಪತಿ ಸ್ಥಾನಗಳ ನೇಮಕದತ್ತ ರಾಜಕೀಯ ವಲಯದ ಗಮನ ಹರಿದಿದೆ.

## ಸ್ವಾತಂತ್ರ್ಯ ದಿನಕ್ಕೂ ಮುನ್ನ ಶಂಕಿತ ಉಗ್ರ ಬಂಧನ

● ವಿಕ್ರಮ ವಾಹಿನಿ । ಬೆಂಗಳೂರು

ಸ್ವಾತಂತ್ರ್ಯ ದಿನಾಚರಣೆಯ ಮುನ್ನ ಬೆಂಗಳೂರಿನಲ್ಲಿ ಶಂಕಿತ ಉಗ್ರನೊಬ್ಬನನ್ನು ಹೆಬ್ಬಗೋಡಿ ಪೊಲೀಸರು ಬಂಧಿಸಿದ್ದಾರೆ. ಪಶ್ಚಿಮ ಬಂಗಾಳ ಮೂಲದ 25 ವರ್ಷದ ಆಸ್ಲುಲಾ ಮಲ್ಲಿಕ್ ಬಂಧಿತನಾಗಿದ್ದು, ಜಿಗಣಿಯಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಟಿಟಿಪಿ (ತೆಹ್ರೀಕ್–ಎ–ತಾಲಿಬಾನ್ ಪಾಕಿಸ್ತಾನ) ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಶಂಕೆ ವ್ಯಕ್ತವಾಗಿದೆ.

ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣೆ ವೇಳೆ ಮಲ್ಲಿಕ್‌ನ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಸುಳಿವು ಸಿಕ್ಕಿತ್ತು. ಇನ್‌ಸ್ಪೆಕ್ಟರ್ ಸೋಮಶೇಖರ್ ನೇತೃತ್ವದ ತಂಡ ಒಂದು ತಿಂಗಳ ಕಾಲ ಮಾಹಿತಿ ಸಂಗ್ರಹಿಸಿ ಆತನನ್ನು ಬಂಧಿಸಿದೆ. ವಿಚಾರಣೆ ವೇಳೆ ಪಾಕಿಸ್ತಾನ ಸೇನೆ ವಿರುದ್ಧ ಪ್ರತೀಕಾರದ ಸಂದೇಶಗಳು ಹಾಗೂ ಆಡಿಯೋಗಳು ಆತನ ಮೊಬೈಲ್‌ನಲ್ಲಿ ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಟಿಟಿಪಿ ಸದಸ್ಯ ಎನ್ನಲಾಗಿರುವ ಅಫ್ಘಾನಿಸ್ತಾನ ಮೂಲದ ಇಮ್ರಾನ್ ಅಹಿಂದರ್‌ನೊಂದಿಗೆ ಸಂಪರ್ಕ ಹೊಂದಿದ್ದ ಮಲ್ಲಿಕ್, ಅಫ್ಘಾನಿಸ್ತಾನಕ್ಕೆ ತೆರಳಲು ಪಾಸ್‌ಪೋರ್ಟ್ ಮಾಡಿಸಿಕೊಂಡು ವೀಸಾಗೂ ಅರ್ಜಿ ಸಲ್ಲಿಸಿದ್ದ ಎನ್ನಲಾಗಿದೆ. ತರಬೇತಿ ಪಡೆದು ಭಾರತಕ್ಕೆ ಮರಳಿ ವಿಧ್ವಂಸಕ ಕೃತ್ಯ ಎಸಗುವ ಸಂಚು ರೂಪಿಸಿದ್ದನೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಮಲ್ಲಿಕ್ ವಾಸವಿದ್ದ ಕೊಠಡಿಯಲ್ಲಿದ್ದ ಪಶ್ಚಿಮ ಬಂಗಾಳ ಮೂಲದ ಮತ್ತೊಬ್ಬ ವ್ಯಕ್ತಿ ಪರಾರಿಯಾಗಿದ್ದು, ಆತನಿಗಾಗಿ ಶೋಧ ನಡೆಸಲಾಗುತ್ತಿದೆ. ಕೆಲ ಸಂಘಟನೆಗಳಿಗೆ ಹಣ ವರ್ಗಾವಣೆ ಮಾಡಿರುವ ಆರೋಪದ ಬಗ್ಗೆಯೂ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ವಿಧಾನಸಭೆ ನೂತನ ಸಭಾಪತಿಯಾಗಿ ಆಯ್ಕೆಯಾದ ಜಿ.ಎಸ್. ಪಾಟೀಲ್ ಅವರನ್ನು ಶುಕ್ರವಾರ ಸಿಎಂ ಡಿ.ಕೆ. ಶಿವಕುಮಾರ್ ಅಭಿನಂದಿಸಿದರು. ಈ ವೇಳೆ ಹಂಗಾಮಿ ಸಭಾಪತಿ ಟಿ.ಬಿ. ಜಯಚಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಹಾಗೂ ಜೆಡಿಎಸ್ ಮುಖಂಡ ಸುರೇಶ್ ಬಾಬು ಉಪಸ್ಥಿತರಿದ್ದರು.

### ಸವಿ ವಾಹಿನಿ

ಸ್ವಾತಂತ್ರ್ಯವು ಬಣ್ಣಗಳು ಅಥವಾ ಆಕಾರಗಳನ್ನು ನೋಡುವುದಿಲ್ಲ. ಈಗಾಗಲೇ ಜಗತ್ತಿನಲ್ಲಿ ಸಾಕಷ್ಟು ದ್ವೇಷ ಮತ್ತು ಹಿಂಸೆಯಿದೆ ಅವುಗಳ ನಡುವೆ ಈಗ ನಾವು ಪ್ರೀತಿ, ಏಕತೆ ಮತ್ತು ತಿಳುವಳಿಕೆಯಿಂದ ಉತ್ತಮ ಭವಿಷ್ಯವನ್ನು ನಿರ್ಮಿಸಬೇಕಾಗಿದೆ.

### ದಿನ ಪಂಚಾಂಗ

ಆಗಸ್ಟ್, 15-2026 ವರ್ಷ ಋತು, ಶ್ರಾವಣ ಮಾಸ,
ಶುದ್ಧ ಪಕ್ಷ. ತದಿಗೆ ತಿಥಿ ರಾ-7:26
ಪುಬ್ಬ ನಕ್ಷತ್ರ ಬೆ-6:29
ರಾಹುಕಾಲ ಬೆ-9:16-10:50
ಸಂಪದ್ಗೌರೀ ವ್ರತ, ಶ್ರಾವಣ ಶನಿವಾರ,
ತಿರುಪ್ಪಾಡಿಪುರಂ ಆಳ್ವಾರ್ ತಿರುನಕ್ಷತ್ರ

### ಸಂಪಾದಕೀಯ

# ಸ್ವಾತಂತ್ರ್ಯ ಮತ್ತು ಯುವ ಜನರು: ಹಕ್ಕಿನ ಜೊತೆ ಹೊಣೆಗಾರಿಕೆಯೂ ಇರಲಿ

ಸ್ವಾತಂತ್ರ್ಯ ಎಂದರೆ ಕೇವಲ ಬಂಧನಗಳಿಂದ ಮುಕ್ತಿ ಹೊಂದುವುದಲ್ಲ. ಅದು ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ ಅವಕಾಶ, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಹಾಗೂ ಉತ್ತಮ ಸಮಾಜವನ್ನು ನಿರ್ಮಿಸುವ ಜವಾಬ್ದಾರಿಯೂ ಹೌದು. ಭಾರತ ಸ್ವಾತಂತ್ರ್ಯ ಪಡೆದು ಹಲವು ದಶಕಗಳು ಕಳೆದಿವೆ. ಈ ಅವಧಿಯಲ್ಲಿ ದೇಶ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆರ್ಥಿಕತೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಈ ಪ್ರಗತಿಯ ಹಿಂದೆ ದೇಶದ ಯುವಜನರ ಪಾತ್ರವೂ ಮಹತ್ವದ್ದಾಗಿದೆ.

ಇಂದಿನ ಯುವಕರು ದೇಶದ ಭವಿಷ್ಯ ಮಾತ್ರವಲ್ಲ, ವರ್ತಮಾನದ ಶಕ್ತಿಯೂ ಹೌದು. ಅವರ ಕೈಯಲ್ಲಿರುವ ಮೊಬೈಲ್, ಸಾಮಾಜಿಕ ಜಾಲತಾಣಗಳು ಮತ್ತು ಇಂಟರ್‌ನೆಟ್ ಜಗತ್ತನ್ನು ಕ್ಷಣಾರ್ಧದಲ್ಲಿ ಸಂಪರ್ಕಿಸುವ ಸಾಮರ್ಥ್ಯ ಹೊಂದಿವೆ. ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳುವ ಅವಕಾಶ ಯುವಜನರಿಗೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಆದರೆ ಈ ಸ್ವಾತಂತ್ರ್ಯವನ್ನು ಜವಾಬ್ದಾರಿಯಿಂದ ಬಳಸುವುದು ಅತ್ಯಂತ ಅಗತ್ಯ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಮಾತಿನ ಸ್ವಾತಂತ್ರ್ಯವಿದೆ. ಆದರೆ ಸುಳ್ಳು ಸುದ್ದಿಗಳನ್ನು ಹರಡುವುದು, ಪರಿಶೀಲಿಸದ ಮಾಹಿತಿಯನ್ನು ಹಂಚುವುದು, ವ್ಯಕ್ತಿಗಳ ವಿರುದ್ಧ ದ್ವೇಷ ಬೆಳೆಸುವುದು ಅಥವಾ ಸಮಾಜದಲ್ಲಿ ಗೊಂದಲ ಸೃಷ್ಟಿಸುವ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸುವುದು ಸ್ವಾತಂತ್ರ್ಯದ ದುರ್ಬಳಕೆಯಾಗುತ್ತದೆ. ಅಭಿಪ್ರಾಯ ಭಿನ್ನವಾಗಿರುವುದು ಪ್ರಜಾಪ್ರಭುತ್ವದ ಸಹಜ ಲಕ್ಷಣ. ಆದರೆ ಭಿನ್ನಾಭಿಪ್ರಾಯವನ್ನು ದ್ವೇಷವಾಗಿ ಪರಿವರ್ತಿಸುವುದು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಅಪಾಯಕಾರಿ.

ಮತದಾನದ ಹಕ್ಕು ಯುವಜನರಿಗೆ ದೊರೆತಿರುವ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ಶಕ್ತಿ. ಆದರೆ ಹಣ, ಜಾತಿ, ಧರ್ಮ, ವೈಯಕ್ತಿಕ ಲಾಭ ಅಥವಾ ಕ್ಷಣಿಕ ಭಾವನೆಗಳ ಆಧಾರದ ಮೇಲೆ ಮತ ಚಲಾಯಿಸುವ ಬದಲು ಅಭ್ಯರ್ಥಿಯ ಸಾಮರ್ಥ್ಯ, ಪ್ರಾಮಾಣಿಕತೆ ಮತ್ತು ಜನಪರ ನಿಲುವುಗಳನ್ನು ಪರಿಗಣಿಸಬೇಕು. ಚುನಾವಣೆಯ ಸಮಯದಲ್ಲಿ ಮಾತ್ರ ರಾಜಕೀಯದ ಬಗ್ಗೆ ಮಾತನಾಡದೆ, ಆಡಳಿತದ ಕಾರ್ಯವೈಖರಿಯನ್ನು ಪ್ರಶ್ನಿಸುವುದು ಮತ್ತು ಜನಪ್ರತಿನಿಧಿಗಳ ಜವಾಬ್ದಾರಿಯನ್ನು ನೆನಪಿಸುವುದೂ ನಾಗರಿಕ ಕರ್ತವ್ಯವಾಗಿದೆ.

ಸ್ವಾತಂತ್ರ್ಯ ಎಂದರೆ ನಮಗೆ ಇಷ್ಟ ಬಂದಂತೆ ವರ್ತಿಸುವ ಪರವಾನಗಿ ಅಲ್ಲ. ನಮ್ಮ ಹಕ್ಕು ಮತ್ತೊಬ್ಬರ ಹಕ್ಕಿಗೆ ಧಕ್ಕೆ ತರದಂತೆ ಬದುಕುವುದೇ ನಿಜವಾದ ಸ್ವಾತಂತ್ರ್ಯ. ಸಾರ್ವಜನಿಕ ಆಸ್ತಿ ಹಾನಿ ಮಾಡುವುದು, ಕಾನೂನು ಉಲ್ಲಂಘಿಸುವುದು, ಪ್ರತಿಭಟನೆಯ ಹೆಸರಿನಲ್ಲಿ ಹಿಂಸಾಚಾರ ನಡೆಸುವುದು ಅಥವಾ ಸಾಮಾಜಿಕ ಶಾಂತಿಗೆ ಧಕ್ಕೆ ತರುವುದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ.

ಇಂದಿನ ಯುವಜನರು ಪ್ರಶ್ನಿಸಬೇಕು, ಚರ್ಚಿಸಬೇಕು, ಸರ್ಕಾರವನ್ನು ಟೀಕಿಸಬೇಕು. ಆದರೆ ಅದೇ ವೇಳೆ ಸತ್ಯಾಸತ್ಯತೆ ಪರಿಶೀಲಿಸಬೇಕು, ಕಾನೂನಿಗೆ ಗೌರವ ನೀಡಬೇಕು ಮತ್ತು ತಮ್ಮ ಕರ್ತವ್ಯವನ್ನೂ ಮರೆಯಬಾರದು. ದೇಶದ ಸ್ವಾತಂತ್ರ್ಯವನ್ನು ಉಳಿಸುವ ಹೊಣೆ ಕೇವಲ ಸರ್ಕಾರದ್ದಲ್ಲ; ಪ್ರತಿಯೊಬ್ಬ ನಾಗರಿಕನದ್ದೂ ಹೌದು.

ಈ ಸ್ವಾತಂತ್ರ್ಯ ದಿನದಂದು ಯುವಜನರು ಒಂದು ಸಂಕಲ್ಪ ಮಾಡಬೇಕಿದೆ-ಸ್ವಾತಂತ್ರ್ಯವನ್ನು ಅನುಭವಿಸುವುದಷ್ಟೇ ಅಲ್ಲ, ಅದನ್ನು ಜವಾಬ್ದಾರಿಯಿಂದ ಕಾಪಾಡೋಣ. ಪ್ರಜಾಪ್ರಭುತ್ವವನ್ನು ಬಳಸೋಣ, ದುರ್ಬಳಕೆ ಮಾಡಿಕೊಳ್ಳದಿರೋಣ. ಆಗ ಮಾತ್ರ ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಕನಸಿನ ಭಾರತವನ್ನು ಕಟ್ಟಲು ಸಾಧ್ಯ.

-ಸಂಪಾದಕ

# ಯೋಗಕ್ಷೇಮಂ ವಹಾಮ್ಯಹಂ

ಭಗವದ್ಗೀತೆಯ ಒಂಬತ್ತನೆಯ ಅಧ್ಯಾಯದ 22ನೆಯ ಪ್ರಸಿದ್ಧ ಶ್ಲೋಕವಾದ ಯೋಗಕ್ಷೇಮಂ ವಹಾಮ್ಯಹಂ ಎಂಬ ಭಗವದ್ಗೀತೆಯ ಉಕ್ತಿಯನ್ನು ಘೋಷವಾಕ್ಯವಾಗಿ ಇಟ್ಟುಕೊಂಡ ಈ ದೇಶದ ಏಕೈಕ ಸಂಸ್ಥೆಯೆಂದರೆ ಅದು ಭಾರತೀಯ ಜೀವ ವಿಮಾ ನಿಗಮ. ನಿಮ್ಮ ಕಲ್ಯಾಣವೇ ನಮ್ಮ ಜವಾಬ್ದಾರಿ- ಎಂಬುದು ಘೋಷವಾಕ್ಯದ ಅರ್ಥ. ಈ ಸಂಸ್ಥೆಯನ್ನು ಎಲ್‌ಐಸಿ ಆಫ್ ಇಂಡಿಯಾ ಎಂದು ಕರೆಯುತ್ತಾರೆ. ಜನರ ಬಾಯಲ್ಲಿ ಇದು ಎಲ್ ಐಸಿ ಎಂದೇ ಜನಜನಿತ.

ಬೆವರು ಸುರಿಸಿ ರಕ್ತ ಹರಿಸಿ ಗಳಿಸಿದ ಬಡವರ ಹಣವನ್ನು ಹುರಿಹುರಿದು ಮುಕ್ಕುವ ಸರ್ವಾಂಗ ಚಾಳಿ ಈ ದೇಶದ ಉದ್ಯಮಿಗಳಿಗೆ ಕರತಲಾಮಲಕ. ದುಡಿವ ಜನರ ಲಾಭಾಂಶವನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳುವ ದೇಶದ ಉಳ್ಳವರ ಖಯಾಲಿ ಕೂಡ ಭಾರತಕ್ಕೆ ಹೊಸತೇನಲ್ಲ. ಇದು ಸ್ವಾತಂತ್ರ್ಯ ಪಡೆಯುವುದಕ್ಕಿಂತ ಮೊದಲು ಮತ್ತು ಆಮೇಲೆಯೂ ನಿರಂಕುಶವಾಗಿ ಅಂಟಿಕೊಂಡೇ ಬಂದಿರುವ ಅರ್ಬುದ. ಈ ಅರ್ಬುದವನ್ನು ವಾಸಿಮಾಡುವ ಹೊಣೆಯನ್ನು ಹೊತ್ತ ಸರಕಾರ, ವಾಸಿಮಾಡುವ ಬದಲು ಅದಕ್ಕೆ ಸೊಪ್ಪು ಗೊಬ್ಬರ ಕೊಟ್ಟು ಪೋಷಿಸುತ್ತಿರುವುದು ಈ ದೇಶದ ದೊಡ್ಡ ದೌರ್ಭಾಗ್ಯವೂ ಅಹುದು, ದುರಂತವೂ ಅಹುದು.

ಇಂಥ ಅನಿಷ್ಟಗಳಿಂದ ದೇಶವಾಸಿಗಳನ್ನು ರಕ್ಷಿಸುವ ಉದ್ದೇಶದಿಂದ ಯೋಗಕ್ಷೇಮಂ ವಹಾಮ್ಯಹಂ (ನಿನ್ನ ಯೋಗಕ್ಷೇಮದ ಸಂಪೂರ್ಣ ಜವಾಬ್ದಾರಿ ನನ್ನದು ಅಥವಾ ನಿಮ್ಮ ಕಲ್ಯಾಣವೇ ನಮ್ಮ ಜವಾಬ್ದಾರಿ) ಎನ್ನುವ ಭಗವದ್ಗೀತೆಯ ಶ್ಲೋಕವನ್ನ ಸುಘೋಷ ವಾಕ್ಯವಾಗಿ ಇಟ್ಟುಕೊಂಡು ಉದಯವಾಗಿದ್ದೇ ದೇಶದ ಜನರ ಜೀವನಾಡಿ ಭಾರತೀಯ ಜೀವವಿಮಾ ನಿಗಮ (ಐಉಅ).

1955ರಲ್ಲಿ, ಸಂಸದ ಅಮೋಲ್ ಭಾರತೆ ಮತ್ತು ಫಿರೋಜ್ ಗಾಂಧಿ ಅವರು ದೇಶದ ಖಾಸಗಿ ಒಡೆತನದ ವಿಮಾ ಕಂಪನಿಗಳು ಮಾಡುತ್ತಿರುವ ಮೋಸವನ್ನು ವಂಚನೆಯನ್ನು ಸಂಸತ್ತಿನಲ್ಲಿ ವಿವರಿಸಿದರು. ಅದರ ಅನ್ವಯ ದೇಶದ ಪ್ರತಿಷ್ಠಿತ ನಿಯತಕಾಲಿಕ ಟೈಮ್ಸ್ ಆಫ್ ಇಂಡಿಯಾದ ಮಾಲೀಕ, ಸಿರಿವಂತ ಉದ್ಯಮಿ ರಾಮಕೃಷ್ಣ ದಾಲ್ಮಿಯಾ ಅವರು ಜೈಲು ಶಿಕ್ಷೆಯನ್ನು ಅನುಭವಿಸುವಂತಾಯಿತು. ಖಾಸಗಿ ಉದ್ದಿಮೆಗಳ ವಂಚನೆಗೊಂದು ಅಂತ್ಯ ಹಾಡುವ ಉದ್ದೇಶದಿಂದ ಅಂದಿನ ವಿತ್ತಸಚಿವರಾದ ಸಿ.ಡಿ.ದೇಶಮುಖ್ ಅವರು ಭಾರತೀಯ ಜೀವವಿಮಾ ನಿಗಮಕ್ಕೆ ನಾಂದಿ ಹಾಡಿದರು.

ಸುಮಾರು 245 ಖಾಸಗಿ ವಲಯದ ವಿಮಾ ಮತ್ತು ಅದಕ್ಕೆ ಸಂಬಂಧಿಸಿದ ಕಂಪನಿಗಳನ್ನು (ಹದಿನಾರು ವಿದೇಶಿ ಕಂಪನಿಗಳೂ ಸೇರಿ) ಸೇರಿಸಿಕೊಂಡು ಭಾರತೀಯ ಜೀವ ವಿಮಾ ನಿಗಮ ಜನ್ಮ ತಾಳಿಯೇ ಬಿಟ್ಟಿತು. ದೇಶದ ಮತ್ತು ಪ್ರಜಾಭಿವೃದ್ಧಿಯನ್ನೇ ಮೂಲ ಮಂತ್ರವಾಗಿಸಿಕೊಂಡು 19 ಜೂನ್ 1956 ರಂದು ಜನ್ಮತಾಳಿದ ಎಲ್‌ಐಸಿ ತನ್ನ ಅಧಿಕೃತ ಕಾರ್ಯವನ್ನು ಪ್ರಾರಂಭಿಸಿದ್ದು ಮಾತ್ರ ಅದೇ ವರ್ಷದ ಸೆಪ್ಟೆಂಬರ್ ಒಂದರಿಂದ. ಅಂದಿನಿಂದ ಇಂದಿನವರೆಗೂ ಖಾಸಗಿ ಕಂಪನಿಗಳ ಕೆಂಗಣ್ಣಿನ ನೋಟವನ್ನು ಲೆಕ್ಕಿಸದೆ ಯಾರೂ ಊಹಿಸದ ರೀತಿಯಲ್ಲಿ ಅತ್ಯಂತ ಪಾರದರ್ಶಕವಾದ ವ್ಯವಹಾರದೊಂದಿಗೆ ಬೆಳೆದು ಬಂದ ಎಲ್‌ಐಸಿ ದೇಶದ ಪ್ರತಿಷ್ಠಿತ ಮತ್ತು ಅತ್ಯಂತ ವಿಶ್ವಾಸಾರ್ಹ ಸರಕಾರಿ ಸ್ವಾಮ್ಯದ ಕಂಪನಿಯಾಗಿ ಬೆಳೆದು ನಿಂತಿದೆ. ವಿಶ್ವದ ಅತ್ಯಂತ ದುಬಾರಿ ಸ್ಥಳಗಳಲ್ಲಿ ಒಂಬತ್ತನೆಯದಾದ ನವದೆಹಲಿಯ ಕನೌಟ್ ಪ್ಲೇಸ್ ಅಲ್ಲಿ ಇರುವ ವಲಯ ಕಛೇರಿಯೂ ಸೇರಿ ಐದು ವಲಯ ಕಚೇರಿಗಳು, 33 ವಿಭಾಗೀಯ ಕಚೇರಿಗಳು, 245 ಶಾಖಾ ಕಛೇರಿಗಳನ್ನು 1956ರಲ್ಲಿ ಎಲ್‌ಐಸಿ ಹೊಂದಿತ್ತು. ಮತ್ತು 348.68ಕೋಟಿ ಮೂಲ ಬಂಡವಾಳದೊಂದಿಗೆ ಪ್ರಾರಂಭವಾದ ಸಂಸ್ಥೆಯ ಇಂದಿನ ಬಂಡವಾಳ ಮೌಲ್ಯ ಸರಿಸುಮಾರು 55 ಲಕ್ಷ ಕೋಟಿಗಳಿಗಿಂತ ಹೆಚ್ಚು. 2048 ಸಂಪೂರ್ಣ ಗಣಕೀಕೃತ ಶಾಖಾ ಕಛೇರಿಗಳು, 113 ವಿಭಾಗೀಯ ಕಚೇರಿಗಳು, 8 ವಲಯ ಕಚೇರಿಗಳು, 1381 ಸ್ಯಾಟ್ ಲೈಟ್ ಕಚೇರಿಗಳು ಮತ್ತು ಕಾರ್ಪೊರೇಟ್ ಕಚೇರಿಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಸುಮಾರು 81.7 ಕೋಟಿ ವಿಮಾ ಕಂತುಗಳೊಂದಿಗೆ ಪ್ರಾರಂಭವಾದ ಎಲ್‌ಐಸಿ ಯ ಇಂದಿನ ವಿಮಾ ಕಂತುಗಳ ಮೊತ್ತ ಸುಮಾರು 3 ಲಕ್ಷ ಕೋಟಿ. 54 ಲಕ್ಷ ಪಾಲಿಸಿಗಳೊಂದಿಗೆ ಪ್ರಾರಂಭವಾದ ಸಂಸ್ಥೆಯ ಇಂದಿನ ಪಾಲಿಸಿಗಳ ಸಂಖ್ಯೆ ಸುಮಾರು 42 ಕೋಟಿ. ಎಂದಿಗೂ ಪಾಲಿಸಿದಾರರ ಪರವಾಗಿಯೇ ಇರುವ ಎಲ್‌ಐಸಿಯು ಬೇರೆ ವಿಮಾ ಕಂಪನಿಗಳೊಂದಿಗೆ ಎಂದೂ ಸ್ಪರ್ಧಿಸಿದ ಉದಾಹರಣೆ ಇಲ್ಲ.

ಪಾಲಿಸಿದಾರರ ಹಣವನ್ನು ಅತ್ಯಂತ ನ್ಯಾಯಬದ್ಧವಾಗಿ ಪಾಲಿಸಿದಾರರಿಗೆ ತಲುಪಿಸುವಲ್ಲಿ ಪ್ರಪಂಚದಲ್ಲಿಯೇ ಅಗ್ರಗಣ್ಯ ಮತ್ತು ಅಷ್ಟೇ ಪಾರದರ್ಶಕವಾದ ಸಂಸ್ಥೆಯೆಂದರೆ ಎಲ್‌ಐಸಿ. ಮರಣದ ನಂತರದ ಸೆಟ್ಲ್ ಮೆಂಟ್ ಗಳಲ್ಲಿ ಏನಾದರೂ ತೊಡಕುಗಳಿದ್ದಾಗ ಬಹಳಷ್ಟು ಬಾರಿ ಮೃದು ಧೋರಣೆಯನ್ನ ತಾಳಿ ಪಾಲಿಸಿದಾರರ ಕುಟುಂಬಕ್ಕೆ ಒಳಿತಾಗುವ ಬಗೆಯಲ್ಲಿ ವರ್ತಿಸಿ ಹಣ ಪಾವತಿಸುವ ಇನ್ನೊಂದು ಜೀವವಿಮಾ ಕಂಪನಿ ಪ್ರಪಂಚದಲ್ಲಿಯೇ ಇಲ್ಲ.

8 ವಲಯ ಕಚೇರಿಗಳನ್ನು, ಸುಮಾರು 113 ವಿಭಾಗೀಯ ಕಚೇರಿಗಳನ್ನು, ಸುಮಾರು 2048 ಕ್ಕೂ ಹೆಚ್ಚು ಗಣಕೀಕೃತ ಶಾಖೆಗಳನ್ನು ಮತ್ತು 1381 ಸ್ಯಾಟಲೈಟ್ ಕಚೇರಿಗಳನ್ನು ದೇಶಾದ್ಯಂತ ಹೊಂದಿರುವ ಈ ಸಂಸ್ಥೆಯು ಸುಮಾರು 1.5 ಲಕ್ಷ ಜನರಿಗೆ ಉದ್ಯೋಗದಾತ ಎನಿಸಿದೆ. ಮತ್ತು ಸುಮಾರು 12 ಲಕ್ಷಕ್ಕೂ ಅಧಿಕ ಪ್ರತಿನಿಧಿಗಳ ಹೊಟ್ಟೆ ತುಂಬಿಸುತ್ತಿದೆ.

ಭಾರತೀಯ ಜೀವ ವಿಮಾ ನಿಗಮ (ಐಉಅ) ರಾಷ್ಟ್ರ ನಿರ್ಮಾಣದಲ್ಲಿ ಬಹುಮುಖಿ ಪಾತ್ರವನ್ನು ವಹಿಸುತ್ತದೆ, ಇದು ಜೀವ ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವುದನ್ನು ಮೀರಿ ವಿಸ್ತರಿಸುತ್ತದೆ. ಇದರ ಕೊಡುಗೆಗಳು ಆರ್ಥಿಕ ಸ್ಥಿರತೆ, ಸಾಮಾಜಿಕ ರಕ್ಷಣೆ, ಬಂಡವಾಳ ರಚನೆ, ಉದ್ಯೋಗ, ಮೂಲಸೌಕರ್ಯ ಹಣಕಾಸು ಮತ್ತು ಆಡಳಿತವನ್ನು ಒಳಗೊಂಡಿವೆ. ಪ್ರಮುಖ ಪಾತ್ರಗಳು ಮತ್ತು ಕಾರ್ಯವಿಧಾನಗಳು:

**1. ಆರ್ಥಿಕ ಸೇರ್ಪಡೆ ಮತ್ತು ಸಾಮಾಜಿಕ ಭದ್ರತೆ**

ನಗರ ಮತ್ತು ಗ್ರಾಮೀಣ ಕುಟುಂಬಗಳಿಗೆ ಕೈಗೆಟುಕುವ ಜೀವ ವಿಮೆ ಮತ್ತು ಪಿಂಚಣಿ ಉತ್ಪನ್ನಗಳನ್ನು ಒದಗಿಸುವುದು, ಅಕಾಲಿಕ ಮರಣ, ಅಂಗವೈಕಲ್ಯ ಮತ್ತು ವೃದ್ಧಾಪ್ಯದ ವಿರುದ್ಧ ಆರ್ಥಿಕ ರಕ್ಷಣೆಯನ್ನು ಹೆಚ್ಚಿಸುತ್ತದೆ. ಸೂಕ್ಷ್ಮ ವಿಮೆ ಮತ್ತು ಗ್ರಾಮೀಣ-ಕೇಂದ್ರಿತ ವಿತರಣೆಯ ಮೂಲಕ ಕಡಿಮೆ ಆದಾಯದ ಕುಟುಂಬಗಳಿಗೆ ಬೆಂಬಲ ನೀಡುತ್ತದೆ, ದುರ್ಬಲತೆ ಮತ್ತು ಅನೌಪಚಾರಿಕ ಸಾಲವನ್ನು ಕಡಿಮೆ ಮಾಡುತ್ತದೆ.

**2. ದೀರ್ಘಕಾಲೀನ ಉಳಿತಾಯ ಮತ್ತು ಬಂಡವಾಳ ರಚನೆ**

ದತ್ತಿ, ಅವಧಿ ಮತ್ತು ಯೂನಿಟ್-ಲಿಂಕ್ಡ್ ಪಾಲಿಸಿಗಳನ್ನು ಮಾರಾಟ ಮಾಡುವ ಮೂಲಕ ಅಪಾರ ಮನೆಯ ಉಳಿತಾಯವನ್ನು ದೀರ್ಘಾವಧಿಯ ಸಾಧನಗಳಾಗಿ ಸಜ್ಜುಗೊಳಿಸುತ್ತದೆ. ಸಣ್ಣ ಉಳಿತಾಯವನ್ನು ದೊಡ್ಡ ಸಂಗ್ರಹಿತ ನಿಧಿಗಳಾಗಿ ಪರಿವರ್ತಿಸುತ್ತದೆ, ಇದು ದೀರ್ಘಾವಧಿಯ ಯೋಜನೆಗಳು ಮತ್ತು ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಸ್ಥಿರ, ತಾಳ್ಮೆಯ ಬಂಡವಾಳವನ್ನು ಒದಗಿಸುತ್ತದೆ.

**3. ಮೂಲಸೌಕರ್ಯ ಮತ್ತು ಕೈಗಾರಿಕಾ ಹಣಕಾಸು**

ಸರ್ಕಾರಿ ಬಾಂಡ್‌ಗಳು, ಸಾರ್ವಜನಿಕ ವಲಯದ ಸಂಸ್ಥೆಗಳು (ಪಿಎಸ್‌ಯುಗಳು) ಮತ್ತು ಕಾರ್ಪೊರೇಟ್ ಸಾಲಗಳಲ್ಲಿ ಭಾರೀ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತವೆ, ಹೆದ್ದಾರಿಗಳು, ವಿದ್ಯುತ್ ಸ್ಥಾವರಗಳು, ವಸತಿ ಮತ್ತು ಇತರ ಮೂಲಸೌಕರ್ಯಗಳಿಗೆ ಹಣಕಾಸು ಒದಗಿಸುತ್ತವೆ. ನಿರ್ಣಾಯಕ ವಲಯಗಳಲ್ಲಿ ಬಂಡವಾಳ ಸಂಗ್ರಹಣೆ ಮತ್ತು ಸ್ಥಿರತೆಯನ್ನು ಬೆಂಬಲಿಸುವ ಮೂಲಕ, ಕಾರ್ಯತಂತ್ರದ ಸಾರ್ವಜನಿಕ ಕಂಪನಿಗಳಲ್ಲಿ ದೊಡ್ಡ ಷೇರು ಪಾಲನ್ನು ತೆಗೆದುಕೊಳ್ಳುತ್ತದೆ.

**4. ಹಣಕಾಸಿನ ಸ್ಥಿರತೆ ಮತ್ತು ಸಾರ್ವಭೌಮ ಬೆಂಬಲ**

ಸರ್ಕಾರಿ ಭದ್ರತೆಗಳ ಖರೀದಿಯ ಮೂಲಕ ಸರ್ಕಾರಕ್ಕೆ ಪ್ರಮುಖ ದೇಶೀಯ ಸಾಲದಾತನಾಗಿ ಕಾರ್ಯನಿರ್ವಹಿಸುತ್ತದೆ, ಬಜೆಟ್ ಕೊರತೆಗಳಿಗೆ ಹಣಕಾಸು ಒದಗಿಸಲು ಮತ್ತು ಬಾಂಡ್ ಮಾರುಕಟ್ಟೆಗಳನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ. ಸಾರ್ವಜನಿಕ ಸಾಲಕ್ಕೆ ಬೇಡಿಕೆಯ ಊಹಿಸಬಹುದಾದ ಮೂಲವನ್ನು ಒದಗಿಸುತ್ತದೆ, ಸಾಲ ವೆಚ್ಚವನ್ನು ಕಡಿಮೆ ಮಾಡುತ್ತದೆ ಮತ್ತು ಪ್ರತಿ-ಚಕ್ರೀಯ ಹಣಕಾಸು ನೀತಿಯನ್ನು ಬೆಂಬಲಿಸುತ್ತದೆ.

**5. ಮಾರುಕಟ್ಟೆ ಸ್ಥಿರತೆ ಮತ್ತು ಸಾಂಸ್ಥಿಕ ಅಭಿವೃದ್ಧಿ**

ದೀರ್ಘಾವಧಿಯ ಸಾಂಸ್ಥಿಕ ಹೂಡಿಕೆದಾರರಾಗಿ, ಎಲ್‌ಐಸಿ ಆರ್ಥಿಕ ಹಿಂಜರಿತದ ಸಮಯದಲ್ಲಿ ಬೇಡಿಕೆಯನ್ನು ಉಳಿಸಿಕೊಳ್ಳುವ ಮೂಲಕ ಷೇರು ಮತ್ತು ಸಾಲ ಮಾರುಕಟ್ಟೆಗಳಲ್ಲಿನ ಏರಿಳಿತಗಳನ್ನು ಸುಗಮಗೊಳಿಸುತ್ತದೆ. ಹೂಡಿಕೆದಾರ ಕಂಪನಿಗಳಲ್ಲಿ ಷೇರುದಾರರ ತೊಡಗಿಸಿಕೊಳ್ಳುವಿಕೆ ಮತ್ತು ಮಂಡಳಿಯ ಪ್ರಾತಿನಿಧ್ಯದ ಮೂಲಕ ಕಾರ್ಪೊರೇಟ್ ಆಡಳಿತ ಮತ್ತು ಮಾರುಕಟ್ಟೆ ಶಿಸ್ತನ್ನು ಉತ್ತೇಜಿಸುತ್ತದೆ.

**6. ಉದ್ಯೋಗ ಮತ್ತು ಮಾನವ ಬಂಡವಾಳ**

ಲಕ್ಷಾಂತರ ಜನರಿಗೆ ನೇರ ಉದ್ಯೋಗ ನೀಡುತ್ತಿದೆ ಮತ್ತು ವ್ಯಾಪಕವಾದ ಏಜೆನ್ಸಿ ಜಾಲವನ್ನು (ಏಜೆಂಟರು, ಸೂಕ್ಷ್ಮ ವಿಮಾ ಕೆಲಸಗಾರರು) ಬೆಂಬಲಿಸುತ್ತಿದೆ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯವನ್ನು ಸೃಷ್ಟಿಸುತ್ತಿದೆ. ಉದ್ಯೋಗಿ ಕಲ್ಯಾಣ ಮತ್ತು ತರಬೇತಿಗೆ ಹಣಕಾಸು ಒದಗಿಸುತ್ತದೆ, ಹಣಕಾಸು ಸೇವೆಗಳು ಮತ್ತು ಸಂಬಂಧಿತ ವಲಯಗಳಲ್ಲಿ ಕೌಶಲ್ಯ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ.

**7. ಪ್ರಾದೇಶಿಕ ಅಭಿವೃದ್ಧಿ ಮತ್ತು ಸಾಮಾಜಿಕ ಯೋಜನೆಗಳು**

ಆದ್ಯತೆಯ ವಲಯದ ಹಂಚಿಕೆಗಳು ಮತ್ತು ಉದ್ದೇಶಿತ ನಿಧಿಗಳ ಮೂಲಕ ಕೈಗೆಟುಕುವ ವಸತಿ, ಗ್ರಾಮೀಣಾಭಿವೃದ್ಧಿ ಯೋಜನೆಗಳು ಮತ್ತು ಸಾಮಾಜಿಕ ಮೂಲಸೌಕರ್ಯಗಳಲ್ಲಿ (ಶಾಲೆಗಳು, ಆಸ್ಪತ್ರೆಗಳು) ಹೂಡಿಕೆಗಳನ್ನು ಗುರಿಯಾಗಿರಿಸಿಕೊಳ್ಳುತ್ತದೆ. ಪ್ರಾದೇಶಿಕ ಅಸಮಾನತೆಗಳನ್ನು ಪರಿಹರಿಸುವ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮತ್ತು ಅಭಿವೃದ್ಧಿ ಹಣಕಾಸು ಉಪಕ್ರಮಗಳಲ್ಲಿ ಭಾಗವಹಿಸುತ್ತದೆ.

**8. ದೇಶೀಯ ಉಳಿತಾಯವನ್ನು ಕಾರ್ಯತಂತ್ರದ ಉದ್ದೇಶಗಳಿಗಾಗಿ ನಿರ್ದೇಶಿಸುವುದು**

ತನ್ನ ಬಂಡವಾಳದ ಒಂದು ಭಾಗವನ್ನು ರಾಷ್ಟ್ರೀಯ ಆದ್ಯತೆಗಳೊಂದಿಗೆ- ಎಲ್ಲರಿಗೂ ವಸತಿ, ನವೀಕರಿಸಬಹುದಾದ ಇಂಧನ ಮತ್ತು ಕಾರ್ಯತಂತ್ರದ ಕೈಗಾರಿಕೆಗಳು- ನಿರ್ದೇಶಿಸಿದ ಅಥವಾ ಪ್ರೋತ್ಸಾಹಿಸಿದ ಹೂಡಿಕೆಗಳ ಮೂಲಕ ಜೋಡಿಸುತ್ತದೆ. ವಿದೇಶಿ ಬಂಡವಾಳದ ಮೇಲೆ ಅತಿಯಾದ ಅವಲಂಬನೆಯಿಲ್ಲದೆ ದೊಡ್ಡ ಪ್ರಮಾಣದ ಸಂಪನ್ಮೂಲ ಕ್ರೋಢೀಕರಣವನ್ನು ಸಕ್ರಿಯಗೊಳಿಸುತ್ತದೆ, ಆರ್ಥಿಕ ಸಾರ್ವಭೌಮತ್ವವನ್ನು ಹೆಚ್ಚಿಸುತ್ತದೆ.

**9. ಬಿಕ್ಕಟ್ಟಿನ ಪ್ರತಿಕ್ರಿಯೆ ಮತ್ತು ಸ್ಥಿತಿಸ್ಥಾಪಕತ್ವ**

ಆರ್ಥಿಕ ಹಿಂಜರಿತದ ಸಮಯದಲ್ಲಿ ಹೂಡಿಕೆ ಹರಿವನ್ನು ಕಾಯ್ದುಕೊಳ್ಳುವ ಮೂಲಕ ಪ್ರತಿ-ಚಕ್ರೀಯ ಬೆಂಬಲವನ್ನು ಒದಗಿಸುತ್ತದೆ. ಆಘಾತಗಳ ಸಮಯದಲ್ಲಿ ದುರ್ಬಲ ಗುಂಪುಗಳಲ್ಲಿ ಬಳಕೆಯನ್ನು ಉಳಿಸಿಕೊಳ್ಳಲು ಕ್ಲೈಮ್ ಇತ್ಯರ್ಥಗಳು ಮತ್ತು ಪಿಂಚಣಿ ಪಾವತಿಗಳನ್ನು ಒದಗಿಸುತ್ತದೆ.

**10. ವಿಶಿಷ್ಟ ಫಲಿತಾಂಶಗಳು ಮತ್ತು ಸೂಚಕಗಳು**

- ಜೀವ ವಿಮಾ ನುಗ್ಗುವಿಕೆಯಿಂದಾಗಿ ಹೆಚ್ಚಿನ ರಾಷ್ಟ್ರೀಯ ಉಳಿತಾಯ ದರ.
- ಭಾರತದ ಅತಿದೊಡ್ಡ ಸಾಂಸ್ಥಿಕ ಹೂಡಿಕೆದಾರರು ಮತ್ತು ಸಾರ್ವಜನಿಕ ಸಾಲಗಾರರಲ್ಲಿ ಒಬ್ಬರಾಗಿ ಸ್ಥಿರ ಪಾತ್ರ.
- ಔಪಚಾರಿಕ ಹಣಕಾಸು ಕೇಂದ್ರಗಳನ್ನು ಮೀರಿ ವಿಮೆಯನ್ನು ಪ್ರವೇಶಿಸುವಂತೆ ಮಾಡುವ ವಿಶಾಲ ಗ್ರಾಮೀಣ ನುಗ್ಗುವಿಕೆ ಮತ್ತು ಏಜೆಂಟ್ ಜಾಲ.

ಎಲ್‌ಐಸಿಯ ರಾಷ್ಟ್ರ ನಿರ್ಮಾಣದ ಪಾತ್ರವು ರಚನಾತ್ಮಕವಾಗಿದೆ: ಇದು ಮನೆಯ ಉಳಿತಾಯವನ್ನು ದೀರ್ಘಾವಧಿಯ ಬಂಡವಾಳವಾಗಿ ಪರಿವರ್ತಿಸುತ್ತದೆ, ಹಣಕಾಸು ಮತ್ತು ಮಾರುಕಟ್ಟೆ ಸ್ಥಿರತೆಯನ್ನು ಬೆಂಬಲಿಸುತ್ತದೆ, ಮೂಲಸೌಕರ್ಯ ಮತ್ತು ಸಾಮಾಜಿಕ ಯೋಜನೆಗಳಿಗೆ ಹಣಕಾಸು ಒದಗಿಸುತ್ತದೆ, ಉದ್ಯೋಗವನ್ನು ಸೃಷ್ಟಿಸುತ್ತದೆ ಮತ್ತು ಸಮಾಜದಾದ್ಯಂತ ಆರ್ಥಿಕ ರಕ್ಷಣೆಯನ್ನು ವಿಸ್ತರಿಸುತ್ತದೆ. ಎಲ್‌ಐಸಿಯ ದಕ್ಷತೆ, ಆಡಳಿತ ಮತ್ತು ಸಮಕಾಲೀನ ಅಭಿವೃದ್ಧಿ ಆದ್ಯತೆಗಳೊಂದಿಗೆ ಹೊಂದಾಣಿಕೆಯನ್ನು ಬಲಪಡಿಸುವುದು ಭಾರತದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಅದರ ವೇಗವರ್ಧಕ ಪರಿಣಾಮವನ್ನು ಹೆಚ್ಚಿಸುತ್ತದೆ.

**ಇಷ್ಟೊಂದು ದೊಡ್ಡ ಪ್ರತಿಷ್ಠಿತ ಜೀವವಿಮಾ ಸಂಸ್ಥೆ ದೇಶಕ್ಕೇನು ಕೊಟ್ಟಿದೆ?**

ಬಹುಶಃ ದೇಶಕ್ಕೆ ಎಲ್‌ಐಸಿ ಸಲ್ಲಿಸಿದ ಸೇವೆಯನ್ನು ಇನ್ಯಾವ ಕಂಪನಿ ಕೂಡ ಸಲ್ಲಿಸಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. "ಜನರ ಹಣ ಜನರ ಕಲ್ಯಾಣಕ್ಕಾಗಿ" ಅನ್ನುವ ತತ್ವದೊಂದಿಗೆ ಬೆಳೆದು ಬಂದ ಸಂಸ್ಥೆಯಿದು.

ಎಲ್‌ಐಸಿಯು ದೇಶಕ್ಕೆ ಸಲ್ಲಿಸಿದ ಕೆಲವು ಮಹತ್ವದ ಸೇವೆಗಳು:

ಪ್ರಧಾನವಾಗಿ, ಎಲ್‌ಐಸಿಯ ಒಟ್ಟು ಲಾಭದ 5% ಅನ್ನು ಪ್ರತಿ ವರ್ಷ ಭಾರತ ಸರ್ಕಾರಕ್ಕೆ ನೀಡಲಾಗುತ್ತದೆ (ಪ್ರತಿ ವರ್ಷ ಇದು 2000 ಕೋಟಿಗಳಿಗಿಂತ ಹೆಚ್ಚಿರುತ್ತದೆ). ಇತ್ತೀಚೆಗಷ್ಟೇ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ವಾರ್ಷಿಕ ಲಾಭಾಂಶವಾಗಿ 3662ಕೋಟಿ ರೂಗಳನ್ನು ಎಲ್ಐಸಿ ನೀಡಿದೆ.

1. ಪಂಚವಾರ್ಷಿಕ ಯೋಜನೆಗಳಲ್ಲಿ ಸದಾ ಹಣ ಹೂಡುತ್ತ ಬಂದಿರುವ ಸಂಸ್ಥೆಯು, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 184 ಕೋಟಿ ರೂಗಳಷ್ಟು ಹೂಡಿಕೆ ಮಾಡಿತ್ತು.
2. 12ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದು ತೊಡಗಿಸಿದ ಹಣದ ಮೊತ್ತ 10.5 ಲಕ್ಷ ಕೋಟಿಗೂ ಹೆಚ್ಚು.
3. ದೇಶದ ಅಭಿವೃದ್ಧಿಯ ಪಾಲಿನ ಕಾಲುಭಾಗ ಹಣ ಎಲ್‌ಐಸಿಯಿಂದಲೇ ಬರುತ್ತಿದೆ.
4. ಇಡೀ ಪ್ರಪಂಚವೇ ಆರ್ಥಿಕ ಹಿನ್ನಡೆ ಅನುಭವಿಸಿದಾಗಲೆಲ್ಲ ಭಾರತಕ್ಕೆ ಅದರ ಬಿಸಿ ತಟ್ಟಿದ್ದು ತುಂಬಾ ಕಡಿಮೆ. ಇದಕ್ಕೆ ಕಾರಣ ನಮ್ಮ ಎಲ್‌ಐಸಿ ಮತ್ತು ಆರ್ ಬಿಐ ಅನ್ನುವ ಸತ್ಯ ಬಹಳಷ್ಟು ಜನರಿಗೆ ತಿಳಿದಿಲ್ಲ.
5. ಸುಮಾರು 77 ಕೋಟಿ ವೆಚ್ಚದಲ್ಲಿ ಆಸ್ಪತ್ರೆ, ಶಾಲೆ, ಗ್ರಂಥಾಲಯ, ವೃದ್ಧಾಶ್ರಮಗಳಂತಹ ಹಲವು ಯೋಜನೆಗಳನ್ನು ನಿರ್ಮಿಸಿದೆ.
6. ಚೆನ್ನೈನಲ್ಲಿ ಪ್ರವಾಹ ವಿಕೋಪದಿಂದ ಹಾನಿಗೊಳಗಾದ 285 ಹಳ್ಳಿಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಿದೆ. ಜೊತೆಗೆ ವಿಮಾ ದಾಖಲೆಗಳನ್ನು ಕಳೆದುಕೊಂಡ ಎಲ್ಲ ಪಾಲಿಸಿದಾರರಿಗೆ ವಿಮಾ ಮೊತ್ತವನ್ನು ಮರಳಿಸಿದೆ ಅಥವಾ ಹೊಸ ದಾಖಲೆಯನ್ನು ಒದಗಿಸಿದೆ. ಇದು ಕೂಡ ಯಾವುದೇ ವಿಮಾ ಕಂಪನಿಗಳು ಮಾಡದ ಸಾಧನೆಯಾಗಿದೆ.
7. ವಿದೇಶಗಳಲ್ಲೂ ತನ್ನ ಸೇವೆಯನ್ನು ವಿಸ್ತರಿಸಿದ ಎಲ್‌ಐಸಿ, ಬ್ರಿಟನ್ ಮತ್ತು ಮಾರಿಷಸ್ ಗಳಲ್ಲಿ ತನ್ನ ಶಾಖೆಯನ್ನು ಹೊಂದಿದೆ. ಹಾಗೂ ಪ್ರಪಂಚದ ಇತರ ದೇಶಗಳಲ್ಲೂ ತನ್ನ ಸೇವೆಯನ್ನು ಒದಗಿಸುತ್ತಿದೆ.

ನನಗೆ ಗೊತ್ತಿರುವಂತೆ, ಸರಕಾರದ ಯಾವುದೇ ಅನುದಾನವನ್ನು ಪಡೆಯದೆ, ದೇಶದ ಅಭಿವೃದ್ಧಿಗಾಗಿ ಸರಕಾರಕ್ಕೇ ಹಣ ಒದಗಿಸುತ್ತಿರುವ ದೇಶದ ಕೆಲವೇ ಸಂಸ್ಥೆಗಳ ಪೈಕಿ ಎಲ್‌ಐಸಿ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಇಂತಹ ಲಾಭದ ಕಣಜದ ಮೇಲೆ ಖಾಸಗಿ ಉದ್ದಿಮೆದಾರರು ಕಣ್ಣು ಹಾಕುವುದು ಮಾಮೂಲು. ಇವರೊಂದಿಗೆ ಸರಕಾರ ಕೂಡ ತನ್ನ ವಕ್ರದೃಷ್ಟಿಯನ್ನು ಹಾಕುವುದು ಸರಕಾರದ ಆಡಳಿತ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗುತ್ತದೆ. ಅಷ್ಟೇ ಅಲ್ಲ, ಇದು ಖಾಸಗಿ ಉದ್ದಿಮೆಗಳಿಗೆ ಲಾಭ ಮಾಡಿಕೊಡುವ ದುರುದ್ದೇಶವನ್ನೂ ಹೊಂದಿದೆ. ಆ ಮೂಲಕ ಸರಕಾರಿ ಕಂಪನಿಗಳನ್ನು ನಷ್ಟದಲ್ಲಿವೆಯೆಂದು ಮುಚ್ಚುವ ಹುನ್ನಾರವೂ ಇದರ ಹಿಂದೆ ಕೆಲಸ ಮಾಡುತ್ತದೆ.

**ಆಡಬೇಕಾದ ಮಾತು:**

ಇಷ್ಟನ್ನೂ ಬರೆದ (ಎಲ್ ಐಸಿ ಬಗ್ಗೆ ಬರೆಯಲು ಇಷ್ಟೇ ಅಲ್ಲ, ಬೇಕಷ್ಟು ವಿಚಾರಗಳಿವೆ. ಸಂಗತಿಗಳಿವೆ. ನನ್ನ ಜ್ಞಾನದ ಮಿತಿಯಲ್ಲಿ ಇಷ್ಟನ್ನು ಬರೆದಿದ್ದೇನೆ. ಆಫ್ ಕೋರ್ಸ್ ನೀಡಿದ ಅಂಕಿಅಂಶಗಳಲ್ಲಿ ವ್ಯತ್ಯಾಸವಿರಬಹುದು) ನಾನು ಎಲ್ ಐಸಿ ಏಜೆಂಟ್ ಅಂತೂ ಅಲ್ಲವೇ ಅಲ್ಲ. ಆದರೆ, ನನ್ನ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನನಗೆ ಸಹಾಯ ಮಾಡಿದ್ದೇ ಎಲ್‌ಐಸಿ ಎಂದು ರಾಜಾರೋಷವಾಗಿ ಹೇಳುತ್ತೇನೆ. ಅತ್ಯಂತ ಕಷ್ಟದ ದಿನಮಾನದಲ್ಲಿ ಪಾಲಿಸಿಯೊಂದರ ಮರು ಜೀವಂತಿಕೆಗೆ ಮೂರು ಸಲ ಸಾಲವನ್ನು ನೀಡಿ ಚೇತರಿಕೆಯನ್ನು ಎಲ್ ಐಸಿ ಕೊಟ್ಟಿದೆ. ಈಗಂತೂ ಗ್ರಾಹಕರಿಗೆ ಲಾಭವಾಗುವಂಥ ಅನೇಕ ಹೊಸ ಪಾಲಿಸಿಗಳು ಎಲ್‌ಐಸಿಯಲ್ಲಿ ದಿನಕ್ಕೊಂದು ಎಂಬಂತೆ ರಚನೆಯಾಗುತ್ತಿವೆ. ಸತ್ತಮೇಲೆ ಹಣ ಸಿಗಬೇಕು ಅಂತಿದ್ದರೆ ಎಲ್‌ಐಸಿ ಮಾಡಿ ಎಂಬಂಥ ಒಂದು ಅಡ್ಡ ಕಸುಬಿನ ಉಡಾಫೆಯ ಮಾತಿದೆ. ಇದು ಅಜ್ಞಾನ ಮತ್ತು ಬೇಜವಾಬ್ದಾರಿಯ ಪರಮಾವಧಿಯ ಮಾತು, ಅಷ್ಟೆ. ಆದರೆ, ಈಗ ಜೀವಂತವಿರುವಾಗಲೇ ಹಣ ಸಿಗುವಂಥ ಹತ್ತಾರು ಪಾಲಿಸಿಗಳಿವೆ.

ಆಡಲೇಬೇಕಾದ ಮಾತು: ರಾಷ್ಟ್ರಸೇವೆಯಲ್ಲಿ ಭಾರತೀಯ ಜೀವ ವಿಮಾ ನಿಗಮ ಲಾಗಾಯ್ತಿನಿಂದಲೂ ತನ್ನನ್ನು ಒಳಗೊಳ್ಳಿಸಿಕೊಂಡ ರೀತಿ ಅನನ್ಯವಾದುದು ಎಂಬುದನ್ನು ಯಾವತ್ತೂ ಮರೆಯಲಾಗದು, ಮರೆಯಬಾರದು.



**ಟಿ.ದೇವಿದಾಸ್**

# ಜನವಿರೋಧಿ ಪಾರ್ಕಿಂಗ್ ನೀತಿ ಹಿಂಪಡೆಯದಿದ್ದರೆ ಸರ್ಕಾರಕ್ಕೆ ತಕ್ಕ ಪಾಠ: ಆರ್. ಅಶೋಕ್

**● ವಿಕ್ರಮ ವಾಹಿನಿ | ಬೆಂಗಳೂರು**

ಮನೆ ಮುಂದೆ ವಾಹನ ನಿಲ್ಲಿಸುವುದಕ್ಕೂ ಶುಲ್ಕ ವಿಧಿಸುವಂತಹ ಜನವಿರೋಧಿ ಪಾರ್ಕಿಂಗ್ ನೀತಿಯನ್ನು ರಾಜ್ಯ ಸರ್ಕಾರ ತಕ್ಷಣವೇ ಹಿಂಪಡೆಯಬೇಕು. ಇಲ್ಲವಾದರೆ ಮುಂಬರುವ ಜಿಬಿಎ ಚುನಾವಣೆಯಲ್ಲಿ ಬೆಂಗಳೂರಿನ ಜನತೆ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಎಚ್ಚರಿಕೆ ನೀಡಿದ್ದಾರೆ.



ತಮ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸರ್ಕಾರದ ವಿರುದ್ಧ ಪೋಸ್ಟ್ ಮಾಡಿರುವ ಅವರು, ರಾಜಧಾನಿ ಬೆಂಗಳೂರಿನಲ್ಲಿ ಮನೆಗಳ ಮುಂಭಾಗದ ರಸ್ತೆಯಲ್ಲಿ ಸ್ವಂತ ವಾಹನ ನಿಲ್ಲಿಸುವುದಕ್ಕೂ ವಾರ್ಷಿಕ ಶುಲ್ಕ ವಿಧಿಸುವ ಉದ್ದೇಶ ಹೊಂದಿರುವ ಜಿಬಿಎ ಪಾರ್ಕಿಂಗ್ ನಿಯಮಗಳ ಕುರಿತು ವ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಜನರು ಈಗಾಗಲೇ ವಿವಿಧ ರೀತಿಯ ತೆರಿಗೆ ಹಾಗೂ ಶುಲ್ಕಗಳನ್ನು ಪಾವತಿಸುತ್ತಿದ್ದು, ತಮ ಸ್ವಂತ ಮನೆಯ ಮುಂದೆ ವಾಹನ ನಿಲ್ಲಿಸುವುದಕ್ಕೂ ವರ್ಷಕ್ಕೆ 15 ಸಾವಿರ ರೂ.ಗಳಿಂದ 25 ಸಾವಿರ ರೂ.ಗಳವರೆಗೆ ಶುಲ್ಕ ವಿಧಿಸಲು ಸರ್ಕಾರ ಮುಂದಾಗಿರುವುದು ಜನವಿರೋಧಿ ನೀತಿ ಎಂದು ಅವರು ಆರೋಪಿಸಿದ್ದಾರೆ.

ಮನೆ ಮುಂದಿನ ಪಾರ್ಕಿಂಗ್‌ಗೂ ಟ್ಯಾಕ್ಸ್ ವಿಧಿಸುವ ಸರ್ಕಾರದ ಹೊಸ ಸ್ಕೆಚ್ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಆರ್.ಅಶೋಕ್, ಖಾಲಿ ನಿವೇಶನಗಳಲ್ಲಿ ಕಸ ವಿಲೇವಾರಿ ಸೇರಿದಂತೆ ವಿವಿಧ ವಿಚಾರಗಳಲ್ಲಿ ಜನರಿಂದ ಹಣ ವಸೂಲಿ ಮಾಡುವ ಪ್ರಯತ್ನಗಳ ಬೆನ್ನಲ್ಲೇ ಇದೀಗ ಮನೆಗಳ ಮುಂಭಾಗದ ಪಾರ್ಕಿಂಗ್ ಮೇಲೂ ಸರ್ಕಾರದ ಕಣ್ಣು ಬಿದ್ದಿದೆಯೇ ಎಂದು ಪ್ರಶ್ನಿಸಿದ್ದಾರೆ.

ಬೆಂಗಳೂರಿನ ರಸ್ತೆಗಳ ದುಸ್ಥಿತಿಯನ್ನೂ ಪ್ರಸ್ತಾಪಿಸಿರುವ ಅವರು, ನಗರದಲ್ಲಿ ಸಾಲು ಸಾಲು ಗುಂಡಿಗಳಿದ್ದು, ಮಳೆ ಬಂದಾಗ ರಸ್ತೆಗಳು ಜಲಾವೃತವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ರಸ್ತೆಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸದೆ, ಜನರಿಂದ ಪಾರ್ಕಿಂಗ್ ಶುಲ್ಕ ವಸೂಲಿ ಮಾಡಲು ಸರ್ಕಾರಕ್ಕೆ ಯಾವ ನೈತಿಕ ಹಕ್ಕಿದೆ ಎಂದು ಪ್ರಶ್ನಿಸಿದ್ದಾರೆ.

ಪಾರ್ಕಿಂಗ್ ದರ ಹೆಚ್ಚಿಸುವ ಬದಲು ಸರ್ಕಾರ ಮೊದಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಬೇಕು. ಮೆಟ್ರೊ ಕಾಮಗಾರಿಗಳಿಗೆ ವೇಗ ನೀಡುವುದರ ಜತೆಗೆ ಬಿಎಂಟಿಸಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿ ಜನರಿಗೆ ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಜಮೀರ್ ನಡೆಗೆ ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆ

**● ವಿಕ್ರಮ ವಾಹಿನಿ | ಬೆಂಗಳೂರು**

ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹಮದ್ ಖಾನ್ ಅವರು ನಾಳೆ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ ಎನ್ನಲಾದ ವಿಚಾರ ಇದೀಗ ರಾಜ್ಯ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ, ಉಪಚುನಾವಣೆ ಹಾಗೂ ಪಕ್ಷದ ಸಂಘಟನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮದಿಂದ ವಿನಾಯಿತಿ ನೀಡುವಂತೆ ಅವರು ಮನವಿ ಮಾಡಿದ್ದಾರೆ ಎನ್ನಲಾಗಿದೆ. ಈ ವಿಚಾರವನ್ನು ಮುಂದಿಟ್ಟುಕೊಂಡು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರು ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದು ಸಚಿವರಂತಹ ಜವಾಬ್ದಾರಿಯುತ ಜನಪ್ರತಿನಿಧಿಯ ಕರ್ತವ್ಯವಾಗಿದ್ದು, ಅದಕ್ಕಿಂತ ಪಕ್ಷದ ರಾಜಕೀಯ ಚಟುವಟಿಕೆಗಳಿಗೆ ಆದ್ಯತೆ ನೀಡುವುದು ಸರಿಯಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ.

ಜಮೀರ್ ಅವರ ಪತ್ರದ ವಿಚಾರವನ್ನು ಉಲ್ಲೇಖಿಸಿರುವ ಅಶೋಕ್, ಕಾಂಗ್ರೆಸ್ ಸರ್ಕಾರದ ಆದ್ಯತೆಗಳ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜಾರೋಹಣ ಮಾಡಲು ಸಮಯವಿಲ್ಲ ಎನ್ನುವ ಸ್ಥಿತಿ ಬಂದಿರುವುದು ಸರ್ಕಾರದ ಮನಸ್ಥಿತಿಯನ್ನು ತೋರಿಸುತ್ತದೆ ಎಂಬ ಅರ್ಥದಲ್ಲಿ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಸಚಿವರಿಗೆ ರಾಷ್ಟ್ರಧ್ವಜ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶದ ಸ್ವಾತಂತ್ರ್ಯದ ಮಹತ್ವಕ್ಕಿಂತ ಚುನಾವಣಾ ಲೆಕ್ಕಾಚಾರವೇ ಮುಖ್ಯವಾಗಿದೆಯೇ ಎಂದು ಪ್ರಶ್ನಿಸಿದ್ದಾರೆ.

ಅಶೋಕ್ ಅವರು ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕತ್ವವನ್ನೂ ಗುರಿಯಾಗಿಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜಕೀಯ ಸಂಸ್ಕೃತಿಯಲ್ಲೇ ರಾಷ್ಟ್ರದ ವಿಚಾರಗಳಿಗಿಂತ ಅಧಿಕಾರ ಮತ್ತು ಚುನಾವಣಾ ರಾಜಕೀಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಮನಸ್ಥಿತಿ ಇದೆ ಎಂದು ಆರೋಪಿಸಿರುವ ಅವರು, ರಾಹುಲ್ ಗಾಂಧಿ ನೇತತ್ವದ ಕಾಂಗ್ರೆಸ್ ಈ ರೀತಿಯ ಧೋರಣೆಗೆ ಬೆಂಬಲ ನೀಡುತ್ತಿದೆ ಎಂದು ಟೀಕಿಸಿದ್ದಾರೆ.

ಸ್ವಾತಂತ್ರ್ಯೋತ್ಸವಕ್ಕಿಂತ ಪಕ್ಷದ ಸಂಘಟನಾ ಚಟುವಟಿಕೆಗಳಿಗೆ ಆದ್ಯತೆ ನೀಡುವ ನಾಯಕರ ಬಗ್ಗೆ ಜನತೆ ಪ್ರಶ್ನಿಸಬೇಕಾದ ಸಮಯ ಬಂದಿದೆ ಎಂದು ಹೇಳಿದ್ದಾರೆ.

ಜಮೀರ್ ಅಹಮದ್ ಖಾನ್ ಮತ್ತು ರಾಷ್ಟ್ರಧ್ವಜಾರೋಹಣದ ವಿಚಾರ ಇದೇ ಮೊದಲ ಬಾರಿಗೆ ರಾಜಕೀಯ ಚರ್ಚೆಗೆ ಬಂದಿಲ್ಲ. 2022ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜಾರೋಹಣ ನಡೆಸುವ ವಿಚಾರವಾಗಿ ತೀವ್ರ ವಿವಾದ ಉಂಟಾಗಿತ್ತು.

ಆ ಸಂದರ್ಭದಲ್ಲಿ ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಖಾನ್ ಅವರು ನಾಳೆ ಈದ್ಗಾ ಮೈದಾನದಲ್ಲಿ ತ್ರಿವರ್ಣ ಧ್ವಜ ಹಾರಿಸುವುದಾಗಿ ಹೇಳಿದ್ದರು.ಆದರೆ ಮೈದಾನದ ಮಾಲೀಕತ್ವಕ್ಕೆ ಸಂಬಂಧಿಸಿದ ವಿವಾದದ ಹಿನ್ನೆಲೆಯಲ್ಲಿ ಸರ್ಕಾರ ಮಧ್ಯಪ್ರವೇಶಿಸಿತ್ತು. ಅಂದಿನ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ಅವರು ಕಂದಾಯ ಇಲಾಖೆಯ ಸಹಾಯಕ ಆಯುಕ್ತರ ಹ್ದ್ಣಟಿಜಜಜಿಟಿಜಜಯ ಅಧಿಕಾರಿಯೇ ರಾಷ್ಟ್ರಧ್ವಜಾರೋಹಣ ನೆರವೇರಿಸಲಿದ್ದಾರೆ ಎಂದು ಘೋಷಿಸಿದ್ದರು.

ಅಂತಿಮವಾಗಿ 2022ರ ಆ.15ರಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ಈದ್ಗಾ ಮೈದಾನದಲ್ಲಿ ತ್ರಿವರ್ಣ ಧ್ವಜಾರೋಹಣ ಮಾಡಿದ್ದರು.

ಈದ್ಗಾ ಮೈದಾನದ ವಿಚಾರದಲ್ಲಿ ಜಮೀರ್ ಅವರು ರಾಷ್ಟ್ರಧ್ವಜಾರೋಹಣದ ಪರವಾಗಿ ಬಹಿರಂಗವಾಗಿ ನಿಲುವು ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲೇ, ಇದೀಗ ವಿಜಯನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣದಿಂದ ವಿನಾಯಿತಿ ಕೋರಿ ಪತ್ರ ಬರೆದಿದ್ದಾರೆ ಎನ್ನಲಾದ ವಿಚಾರವನ್ನು ಬಿಜೆಪಿ ರಾಜಕೀಯವಾಗಿ ಪ್ರಸ್ತಾಪಿಸುತ್ತಿದೆ.

# ಸ್ವಾತಂತ್ರ್ಯದ ಹಾದಿಯಲ್ಲಿ ತ್ಯಾಗ–ಬಲಿದಾನ

ಬ್ರಿಟಿಷರ ಕಪಿಮುಷ್ಟಿಯಿಂದ ಭಾರತ ಸ್ವಾತಂತ್ರ್ಯ ಪಡೆದು 79 ವರ್ಷಗಳು ಪೂರ್ಣಗೊಂಡು, 80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಕ್ಕೆ ದೇಶ ಸಜ್ಜಾಗಿದೆ. ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯದ ಹಿಂದೆ ಅನೇಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ, ನೋವು ಮತ್ತು ನಿರಂತರ ಹೋರಾಟದ ಇತಿಹಾಸವಿದೆ.

**1857ರ ಮಹಾ ದಂಗೆ**

ಭಾರತದಲ್ಲಿ ಬ್ರಿಟಿಷರು ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಸೇರಿದಂತೆ ಹಲವು ಕ್ರಮಗಳನ್ನು ಜಾರಿಗೆ ತಂದಿದ್ದರು. ಇದರಿಂದ ಅನೇಕ ಸಂಸ್ಥಾನಗಳು ಬ್ರಿಟಿಷರ ವಶಕ್ಕೆ ಹೋಗಿ, ಭಾರತೀಯರಲ್ಲಿ ತೀವ್ರ ಅಸಮಾಧಾನ ಮೂಡಿತ್ತು.

ಈ ಅಸಮಾಧಾನ 1857ರಲ್ಲಿ ದೊಡ್ಡ ದಂಗೆಯಾಗಿ ಸ್ಫೋಟಗೊಂಡಿತು. ಭಾರತೀಯ ಇತಿಹಾಸಕಾರರ ಒಂದು ವರ್ಗ ಇದನ್ನು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆಯುತ್ತದೆ. ಬ್ರಿಟಿಷ್ ದಾಖಲೆಗಳು ಹಾಗೂ ಕೆಲವು ಇತಿಹಾಸಕಾರರು ಇದನ್ನು 'ಸಿಪಾಯಿ ದಂಗೆ' ಎಂದು ವಿವರಿಸಿದ್ದಾರೆ. 1857ರ ಹೋರಾಟದ ಬಳಿಕ ಬ್ರಿಟಿಷ್ ಆಡಳಿತದಲ್ಲಿ ಹಲವು ಮಹತ್ವದ ಬದಲಾವಣೆಗಳು ಸಂಭವಿಸಿದವು.

**ರಾಜಕೀಯ ಜಾಗೃತಿಗೆ ಕಾಂಗ್ರೆಸ್ ನಾಂದಿ**

1857ರ ನಂತರ ಭಾರತೀಯರಲ್ಲಿ ರಾಜಕೀಯ ಜಾಗೃತಿ ಹೆಚ್ಚಾಯಿತು. ಸಾರಿಗೆ, ಸಂಪರ್ಕ, ಪತ್ರಿಕೋದ್ಯಮ ಮತ್ತು ಸಂಘಟನೆಗಳ ಬೆಳವಣಿಗೆಯಿಂದ ಜನರು ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಲು ಆರಂಭಿಸಿದರು. ಬ್ರಿಟಿಷರು ಪತ್ರಿಕಾ ಸ್ವಾತಂತ್ರ್ಯವನ್ನು ನಿಯಂತ್ರಿಸಲು 1878ರಲ್ಲಿ ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ ಜಾರಿಗೆ ತಂದರು. ಮತ್ತೊಂದೆಡೆ, ಲಾರ್ಡ್ ರಿಪ್ಪನ್ ಅವಧಿಯಲ್ಲಿ ಪ್ರಸ್ತಾಪಗೊಂಡ ಇಲ್ಬರ್ಟ್ ಮಸೂದೆ ಕೂಡ ಬ್ರಿಟಿಷರ ವಿರೋಧಕ್ಕೆ ಕಾರಣವಾಯಿತು. ಇಂತಹ ಬೆಳವಣಿಗೆಗಳು ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಕಾರಣವಾದವು. ಇಂಗ್ಲಿಷ್ ಶಿಕ್ಷಣ ಪಡೆದ ಹೊಸ ಪೀಳಿಗೆಯ ಭಾರತೀಯರು ಸಂವಿಧಾನಾತ್ಮಕ ಮಾರ್ಗದಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಆರಂಭಿಸಿದರು. ಇದರ ಪರಿಣಾಮವಾಗಿ 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕಾಂಗ್ರೆಸ್ ದೇಶಾದ್ಯಂತ ರಾಜಕೀಯ ಜಾಗೃತಿ ಮೂಡಿಸಲು ಹಾಗೂ ಭಾರತೀಯರ ಹಕ್ಕುಗಳಿಗಾಗಿ ಹೋರಾಟ ನಡೆಸಲು ವೇದಿಕೆಯಾಯಿತು.

**ಬಂಗಾಳ ವಿಭಜನೆಗೆ ತೀವ್ರ ವಿರೋಧ**

ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟ್ಟಗಳಲ್ಲಿ 1905ರ ಬಂಗಾಳ ವಿಭಜನೆ ಕೂಡ ಒಂದು. ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಕರ್ಜನ್ ಆಡಳಿತಾತ್ಮಕ ಕಾರಣಗಳನ್ನು ಮುಂದಿಟ್ಟುಕೊಂಡು ಬಂಗಾಳವನ್ನು ವಿಭಜಿಸಿದರು. ಆದರೆ ಇದು ಬ್ರಿಟಿಷರ 'ಒಡೆದು ಆಳುವ' ನೀತಿಯ ಭಾಗ ಎಂಬ ಆರೋಪ ವ್ಯಾಪಕವಾಗಿ ಕೇಳಿಬಂತು.

ಬಂಗಾಳ ವಿಭಜನೆಗೆ ದೇಶಾದ್ಯಂತ ತೀವ್ರ ವಿರೋಧ ವ್ಯಕ್ತವಾಯಿತು. ಇದರ ಪರಿಣಾಮವಾಗಿ ಸ್ವದೇಶಿ ಚಳವಳಿ ಬಲಗೊಂಡಿತು. ಭಾರತೀಯರು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ, ದೇಶೀಯ ವಸ್ತುಗಳನ್ನು ಬಳಸುವಂತೆ ಕರೆ ನೀಡಲಾಯಿತು. ರಾಷ್ಟ್ರೀಯ ಚಳವಳಿಗೆ ಹೊಸ ವೇಗ ದೊರೆಯಿತು.

ದೇಶಾದ್ಯಂತ ನಡೆದ ತೀವ್ರ ಪ್ರತಿಭಟನೆಗಳ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1911ರಲ್ಲಿ ಬಂಗಾಳ ವಿಭಜನೆ ಯನ್ನು ರದ್ದು ಗೊಳಿಸಿತು. ಈ ಬೆಳವಣಿಗೆ ಭಾರತೀಯರ ಸಂಘಟಿತ ಹೋರಾಟದ ಶಕ್ತಿಗೆ ಪ್ರಮುಖ ಉದಾಹರಣೆ ಯಾಯಿತು.

ತ್ಯಾಗ–ಬಲಿದಾನ, ಸಂಘಟಿತ ಹೋರಾಟ ಮತ್ತು ದೇಶಭಕ್ತಿಯ ಹಲವು ಹಂತಗಳನ್ನು ದಾಟಿ ಸ್ವಾತಂತ್ರ್ಯ ಚಳವಳಿ ಮುಂದುವರಿಯಿತು. ಮುಂದಿನ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಮುಖ ಚಳವಳಿಗಳು ಮತ್ತು ಮಹಾತ್ಮ ಗಾಂಧೀಜಿ ಅವರ ನೇತೃತ್ವದ ಹೋರಾಟದ ಕುರಿತು.

1915ರಲ್ಲಿ ಮಹಾತ್ಮ ಗಾಂಧೀಜಿ ಭಾರತಕ್ಕೆ ಮರಳಿದ ಬಳಿಕ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕು ದೊರೆಯಿತು. ಸತ್ಯ, ಅಹಿಂಸೆ ಮತ್ತು ಅಸಹಕಾರವನ್ನು ಹೋರಾಟದ ಪ್ರಮುಖ ಅಸ್ತ್ರಗಳನ್ನಾಗಿ ಮಾಡಿಕೊಂಡ ಅವರು, ರೈತರು, ಕಾರ್ಮಿಕರು ಸೇರಿದಂತೆ ಸಾಮಾನ್ಯ ಜನರನ್ನು ರಾಷ್ಟ್ರೀಯ ಚಳವಳಿಯೊಂದಿಗೆ ಬೆಸೆದರು.



## ಸ್ವಾತಂತ್ರ್ಯಕ್ಕೂ ಮುನ್ನ ಹೇಗಿತ್ತು ಧ್ವಜ?

ಭಾರತದ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ರಾಷ್ಟ್ರಧ್ವಜದ ವಿನ್ಯಾಸ ಹಲವು ಹಂತಗಳಲ್ಲಿ ಬದಲಾಗಿತ್ತು. ಮಹಾತ್ಮ ಗಾಂಧೀಜಿಯವರ ಚರಕವು ಸ್ವದೇಶಿ ಚಳವಳಿ ಮತ್ತು ಸ್ವಾವಲಂಬನೆಯ ಸಂಕೇತವಾಗಿ ಧ್ವಜದಲ್ಲಿ ಪ್ರಮುಖ ಸ್ಥಾನ ಪಡೆದಿತ್ತು.

ಆದರೆ ಸ್ವತಂತ್ರ ಭಾರತದ ಅಧಿಕೃತ ರಾಷ್ಟ್ರಧ್ವಜ ರೂಪಿಸುವ ಸಂದರ್ಭದಲ್ಲಿ ಚರಕದ ಬದಲಿಗೆ ಅಶೋಕ ಚಕ್ರವನ್ನು ಅಳವಡಿಸಲಾಯಿತು. ಈ ಮೂಲಕ ಧ್ವಜಕ್ಕೆ ಯಾವುದೇ ಒಂದು ರಾಜಕೀಯ ಸಂಘಟನೆ ಅಥವಾ ಚಳವಳಿಗಿಂತಲೂ ವಿಶಾಲವಾದ ಐತಿಹಾಸಿಕ ಮತ್ತು ರಾಷ್ಟ್ರೀಯ ಅರ್ಥವನ್ನು ನೀಡಲಾಯಿತು.

ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳಲ್ಲಿ ಧ್ವಜದ ಬಣ್ಣ, ವಿನ್ಯಾಸ ಹಾಗೂ ಚಿಹ್ನೆಗಳಲ್ಲಿ ಹಲವು ಬದಲಾವಣೆಗಳು ನಡೆದವು. 1947ರ ಜುಲೈ 22ರಂದು ಸಂವಿಧಾನ ಸಭೆ ತ್ರಿವರ್ಣ ಧ್ವಜವನ್ನು ಸ್ವತಂತ್ರ ಭಾರತದ ರಾಷ್ಟ್ರಧ್ವಜವಾಗಿ ಅಂಗೀಕರಿಸಿತು. ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳ ಮಧ್ಯದಲ್ಲಿ ನೀಲಿ ಅಶೋಕ ಚಕ್ರವನ್ನು ಹೊಂದಿರುವ ಈ ಧ್ವಜವು ದೇಶದ ಏಕತೆ, ಶಾಂತಿ, ಧೈರ್ಯ ಹಾಗೂ ನಿರಂತರ ಪ್ರಗತಿಯ ಸಂಕೇತವಾಗಿ ರೂಪುಗೊಂಡಿತು.

## ಅಶೋಕ ಚಕ್ರದ ಮೂಲ ಎಲ್ಲಿದೆ?

ಅಶೋಕ ಚಕ್ರದ ಪರಿಕಲ್ಪನೆ ಸಾರನಾಥದ ಅಶೋಕ ಸಿಂಹಸ್ತಂಭದಲ್ಲಿರುವ ಧರ್ಮಚಕ್ರದೊಂದಿಗೆ ಸಂಬಂಧ ಹೊಂದಿದೆ. ಚಕ್ರವರ್ತಿ ಅಶೋಕನ ಕಾಲದ ಈ ಸಂಕೇತವು ಧರ್ಮ, ನ್ಯಾಯ ಮತ್ತು ನೀತಿಯ ಮಾರ್ಗವನ್ನು ಪ್ರತಿನಿಧಿಸುತ್ತದೆ. ಸಾರನಾಥದ ಸಿಂಹಸ್ತಂಭದ ಮೇಲಿರುವ ನಾಲ್ಕು ಸಿಂಹಗಳ ಲಾಂಛನವನ್ನು ಸ್ವತಂತ್ರ ಭಾರತವು ತನ್ನ ರಾಜ್ಯ ಲಾಂಛನವಾಗಿ ಸ್ವೀಕರಿಸಿದೆ. ಅದರ ಕೆಳಭಾಗದಲ್ಲಿರುವ ಧರ್ಮಚಕ್ರವೂ ಭಾರತೀಯ ರಾಷ್ಟ್ರೀಯ ಸಂಕೇತಗಳ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆದಿದೆ.



## 24 ಕಡ್ಡಿಗಳ ವಿಶೇಷತೆ ಏನು?

ರಾಷ್ಟ್ರಧ್ವಜದ ಮಧ್ಯದಲ್ಲಿರುವ ಅಶೋಕ ಚಕ್ರದಲ್ಲಿ 24 ಕಡ್ಡಿಗಳಿವೆ. ಅವು ಸಮಾನ ಅಂತರದಲ್ಲಿ ವಿನ್ಯಾಸಗೊಳಿಸಲ್ಪಟ್ಟಿವೆ. ಅಧಿಕೃತ ಧ್ವಜ ಸಂಹಿತೆಯ ಪ್ರಕಾರ, ಚಕ್ರವು ನೇವಿ ಬ್ಲೂ ಬಣ್ಣದಲ್ಲಿದ್ದು, ಬಿಳಿ ಪಟ್ಟಿಯ ಮಧ್ಯಭಾಗದಲ್ಲಿ ಇರಬೇಕು.

24 ಕಡ್ಡಿಗಳಿಗೆ ಪ್ರೀತಿ, ಧೈರ್ಯ, ಶಾಂತಿ, ತ್ಯಾಗ, ಸಂಯಮ, ಸತ್ಯ, ನ್ಯಾಯ, ಕರುಣೆ, ಸೇವೆ, ಸಮಾನತೆ, ಅಹಿಂಸೆ, ಸಹಕಾರ, ನೈತಿಕತೆ ಮತ್ತು ವಿಶ್ವಾಸ ಮುಂತಾದ ವಿವಿಧ ಮಾನವೀಯ ಮೌಲ್ಯಗಳನ್ನು ಜೋಡಿಸಿ ವಿವರಿಸುವ ಜನಪ್ರಿಯ ವ್ಯಾಖ್ಯಾನಗಳಿವೆ.

ಆದರೆ ಗಮನಿಸಬೇಕಾದ ಅಂಶವೆಂದರೆ ಈ 24 ಕಡ್ಡಿಗಳಿಗೆ ಒಂದೊಂದು ನಿರ್ದಿಷ್ಟ ಮೌಲ್ಯವನ್ನು ಸರ್ಕಾರ ಅಧಿಕೃತವಾಗಿ ನಿಗದಿಪಡಿಸಿಲ್ಲ. ಹೀಗಾಗಿ ಇಂತಹ ವಿವರಣೆಗಳನ್ನು ಸಾಂಸ್ಕೃತಿಕ ಮತ್ತು ಜನಪ್ರಿಯ ವ್ಯಾಖ್ಯಾನಗಳಾಗಿ ಪರಿಗಣಿಸುವುದು ಸೂಕ್ತ.

**'ಚಲಿಸುತ್ತಿರು' ಎಂಬ ಸಂದೇಶ:** ಚಕ್ರದ ಅತ್ಯಂತ ಪ್ರಮುಖ ಅರ್ಥಗಳಲ್ಲಿ ಒಂದು ನಿರಂತರ ಚಲನೆ. ಚಕ್ರ ನಿಂತರೆ ಅದರ ಉದ್ದೇಶವೇ ನಿಂತಂತಾಗುತ್ತದೆ. ಅದೇ ರೀತಿ ರಾಷ್ಟ್ರವೂ ಸ್ಥಗಿತಗೊಳ್ಳದೆ ಅಭಿವೃದ್ಧಿ, ಪ್ರಗತಿ ಮತ್ತು ಬದಲಾವಣೆಯತ್ತ ನಿರಂತರವಾಗಿ ಸಾಗಬೇಕು ಎಂಬ ಸಂದೇಶವನ್ನು ಅಶೋಕ ಚಕ್ರದಲ್ಲಿ ಕಾಣಬಹುದು. ಕೆಲವು ಜನಪ್ರಿಯ ವಿವರಣೆಗಳಲ್ಲಿ 24 ಕಡ್ಡಿಗಳನ್ನು ದಿನದ 24 ಗಂಟೆಗಳಿಗೂ ಹೋಲಿಸಲಾಗುತ್ತದೆ. ದೇಶವು ದಿನದ ಪ್ರತಿಯೊಂದು ಕ್ಷಣವೂ ಅಭಿವೃದ್ಧಿಯತ್ತ ಸಾಗಬೇಕು ಎಂಬ ಆಶಯವನ್ನು ಇದಕ್ಕೆ ನೀಡಲಾಗುತ್ತದೆ. ಆದರೆ ಇದೂ ಸಹ ಅಧಿಕೃತ ವಿವರಣೆಯಲ್ಲ ಎಂಬುದನ್ನು ಗಮನಿಸಬೇಕು.

# 80ನೇ ಸ್ವಾತಂತ್ರ್ಯೋತ್ಸವ: ತ್ರಿವರ್ಣದ ವಿಶೇಷತೆಗಳೇನು?

ಭಾರತದ 80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ದೇಶಾದ್ಯಂತ ಮನೆಮಾಡಿರುವ ಸಂದರ್ಭದಲ್ಲಿ, ಪ್ರತಿಯೊಬ್ಬ ಭಾರತೀಯನ ಹೆಮ್ಮೆಯ ಸಂಕೇತವಾಗಿರುವ ರಾಷ್ಟ್ರಧ್ವಜದ ಮಹತ್ವವೂ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳ ತ್ರಿವರ್ಣದ ಮಧ್ಯದಲ್ಲಿರುವ ನೇವಿ ಬ್ಲೂ ಬಣ್ಣದ ಅಶೋಕ ಚಕ್ರವು ಕೇವಲ ಅಲಂಕಾರಿಕ ಚಿಹ್ನೆಯಲ್ಲ. ಇದು ಭಾರತದ ಪ್ರಾಚೀನ ಪರಂಪರೆ, ಧರ್ಮ, ನ್ಯಾಯ, ನಿರಂತರ ಚಲನೆ ಮತ್ತು ಪ್ರಗತಿಯ ಆಶಯವನ್ನು ಪ್ರತಿನಿಧಿಸುವ ಪ್ರಮುಖ ರಾಷ್ಟ್ರೀಯ ಸಂಕೇತವಾಗಿದೆ. ಭಾರತದ ರಾಷ್ಟ್ರಧ್ವಜವನ್ನು ಸಂವಿಧಾನ ಸಭೆ 1947ರ ಜುಲೈ 22ರಂದು ಅಂಗೀಕರಿಸಿತು.

**ತ್ರಿವರ್ಣದ ಮೂರು ಬಣ್ಣಗಳ ಅರ್ಥ**

ಭಾರತದ ರಾಷ್ಟ್ರಧ್ವಜದ ಮೂರು ಬಣ್ಣಗಳಿಗೂ ವಿಶೇಷ ಮಹತ್ವವಿದೆ.

ಕೇಸರಿ: ಧೈರ್ಯ ಮತ್ತು ತ್ಯಾಗದ ಸಂಕೇತವಾಗಿ ಪರಿಗಣಿಸಲಾಗುತ್ತದೆ.

ಬಿಳಿ: ಶಾಂತಿ ಮತ್ತು ಸತ್ಯದ ಸಂಕೇತ.

ಹಸಿರು: ಬೆಳವಣಿಗೆ, ಸಮೃದ್ಧಿ ಮತ್ತು ನೆಲದೊಂದಿಗಿನ ಸಂಬಂಧವನ್ನು ಪ್ರತಿನಿಧಿಸುತ್ತದೆ ಎಂದು ಸಾಮಾನ್ಯವಾಗಿ ವಿವರಿಸಲಾಗುತ್ತದೆ.

ಮೂರು ಪಟ್ಟಿಗಳೂ ಸಮಾನ ಅಗಲ ಹೊಂದಿದ್ದು, ಅವುಗಳ ಮಧ್ಯದಲ್ಲಿ ಅಶೋಕ ಚಕ್ರವಿದೆ. ಧ್ವಜದ ಉದ್ದ–ಅಗಲದ ಪ್ರಮಾಣ 3:2 ಆಗಿರಬೇಕು.

**ರಾಷ್ಟ್ರಧ್ವಜಕ್ಕೆ ಕಾನೂನುಬದ್ಧ ಗೌರವ**

ಭಾರತದ ರಾಷ್ಟ್ರಧ್ವಜವನ್ನು ಬಳಸುವಾಗ ನಾಗರಿಕರು ಹಾಗೂ ಸಂಸ್ಥೆಗಳು ಕೆಲವು ನಿಯಮಗಳನ್ನು ಪಾಲಿಸಬೇಕು. ಈಟಚಿಂ ಅಂಜಜ ಔಜಿ ಖಟಜುಚಿ, 2002 ರಾಷ್ಟ್ರಧ್ವಜದ ಪ್ರದರ್ಶನ, ಬಳಕೆ ಮತ್ತು ಗೌರವಕ್ಕೆ ಸಂಬಂಧಿಸಿದ ನಿಯಮಗಳನ್ನು ವಿವರಿಸುತ್ತದೆ.

ರಾಷ್ಟ್ರಧ್ವಜವನ್ನು ಹರಿದುಹೋದ, ಕೊಳಕು ಅಥವಾ ಹಾನಿಗೊಳಗಾದ ಸ್ಥಿತಿಯಲ್ಲಿ ಪ್ರದರ್ಶಿಸಬಾರದು. ಧ್ವಜವನ್ನು ನೆಲಕ್ಕೆ ಬೀಳದಂತೆ ಮತ್ತು ಅದರ ಗೌರವಕ್ಕೆ ಧಕ್ಕೆ ಬಾರದಂತೆ ಬಳಸಬೇಕು. ರಾಷ್ಟ್ರಧ್ವಜದ ಅವಮಾನಕ್ಕೆ ಸಂಬಂಧಿಸಿದಂತೆ Prevention of Insults to National Honour Act, 1971 ಕೂಡ ಅನ್ವಯಿಸುತ್ತದೆ.



**ಖಾದಿಯಿಂದ ಆಧುನಿಕ ಉತ್ಪಾದನೆಯವರೆಗೆ**

ಭಾರತದ ರಾಷ್ಟ್ರಧ್ವಜದ ಇತಿಹಾಸದಲ್ಲಿ ಖಾದಿಗೂ ವಿಶೇಷ ಸ್ಥಾನವಿದೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಖಾದಿ ಸ್ವಾವಲಂಬನೆ ಮತ್ತು ಸ್ವದೇಶಿ ಚಿಂತನೆಯ ಪ್ರತೀಕವಾಗಿತ್ತು. ಇಂದಿಗೂ ರಾಷ್ಟ್ರಧ್ವಜದ ತಯಾರಿಕೆ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿವೆ.

ಧ್ವಜದ ಗಾತ್ರ, ಬಣ್ಣ, ಬಟ್ಟೆಯ ಗುಣಮಟ್ಟ, ಅಶೋಕ ಚಕ್ರದ ವಿನ್ಯಾಸ ಸೇರಿದಂತೆ ಹಲವು ಅಂಶಗಳಿಗೆ ನಿಗದಿತ ಮಾನದಂಡಗಳನ್ನು ಪಾಲಿಸಲಾಗುತ್ತದೆ.

**'ಹರ್ ಘರ್ ತಿರಂಗಾ' ಮೂಲಕ ಮನೆಮನೆಗೂ ರಾಷ್ಟ್ರಧ್ವಜ**

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ದೇಶದಾದ್ಯಂತ ರಾಷ್ಟ್ರಧ್ವಜ ಹಾರಿಸುವ ಮೂಲಕ ಜನರು ರಾಷ್ಟ್ರೀಯ ಹೆಮ್ಮೆಯನ್ನು ವ್ಯಕ್ತಪಡಿಸುತ್ತಾರೆ. 'ಹರ್ ಘರ್ ತಿರಂಗಾ' ಅಭಿಯಾನವೂ ಜನರನ್ನು ತಮ್ಮ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸಲು ಪ್ರೇರೇಪಿಸುವ ಪ್ರಮುಖ ಕಾರ್ಯಕ್ರಮವಾಗಿದೆ.

ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಮನೆಗಳಲ್ಲಿ ತ್ರಿವರ್ಣ ಹಾರಾಡುವಾಗ ಅದರ ಮಧ್ಯದಲ್ಲಿರುವ ಅಶೋಕ ಚಕ್ರ ಎಲ್ಲರ ಗಮನ ಸೆಳೆಯುತ್ತದೆ.

**ಅಶೋಕ ಚಕ್ರ: ಇತಿಹಾಸದಿಂದ ಭವಿಷ್ಯದತ್ತ**

ಭಾರತದ ರಾಷ್ಟ್ರಧ್ವಜದಲ್ಲಿರುವ ಅಶೋಕ ಚಕ್ರವು ದೇಶದ ಭೂತಕಾಲ ಮತ್ತು ಭವಿಷ್ಯವನ್ನು ಸಂಪರ್ಕಿಸುವ ಸಂಕೇತವಾಗಿದೆ. ಪ್ರಾಚೀನ ಭಾರತದ ಧರ್ಮಚಕ್ರದ ಪರಂಪರೆಯಿಂದ ಪ್ರೇರಣೆ ಪಡೆದಿರುವ ಇದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವ, ನ್ಯಾಯ, ಶಾಂತಿ ಮತ್ತು ನಿರಂತರ ಪ್ರಗತಿಯ ಆಶಯವನ್ನು ಪ್ರತಿಬಿಂಬಿಸುತ್ತದೆ.

ಆದ್ದರಿಂದ ತ್ರಿವರ್ಣ ಧ್ವಜವನ್ನು ನೋಡುವಾಗ ಕೇವಲ ಮೂರು ಬಣ್ಣಗಳನ್ನು ಮಾತ್ರವಲ್ಲ, ಅದರ ಮಧ್ಯದಲ್ಲಿ ನಿರಂತರವಾಗಿ ತಿರುಗುವ ಅಶೋಕ ಚಕ್ರ ನೀಡುವ "ನಿಲ್ಲದೆ ಮುಂದೆ ಸಾಗು" ಎಂಬ ಸಂದೇಶವನ್ನೂ ನೆನಪಿಸಿಕೊಳ್ಳುವುದು ವಿಶೇಷ.

# ಕರ್ನಾಟಕ ಲೋಕಸೇವಾ ಆಯೋಗ ನೇಮಕಾತಿಯಲ್ಲಿ ಹೊಸ ವ್ಯವಸ್ಥೆಗೆ ಚಾಲನೆ

● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದ ಇಂದಿನ ಸಭೆಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಮತ್ತಷ್ಟು ಪಾರದರ್ಶಕ, ತಂತ್ರಜ್ಞಾನಾಧಾರಿತ ಹಾಗೂ ತ್ವರಿತಗೊಳಿಸುವ ಕುರಿತು ಮಹತ್ವದ ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ನೂತನ ಪರೀಕ್ಷಾ ನಿಯಂತ್ರಕರಾಗಿ ಅಧಿಕಾರ ವಹಿಸಿಕೊಂಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಏಇಂ) ಕಾರ್ಯನಿರ್ವಾಹಕ ನಿರ್ದೇಶಕರಾದ ಹೆಚ್. ಪ್ರಸನ್ನ ಅವರನ್ನು ಆಯೋಗದ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಮುಂದಿನ ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಕೇಂದ್ರ ಲೋಕಸೇವಾ ಆಯೋಗ ಮಾದರಿಯಲ್ಲಿ ನಡೆಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಪರೀಕ್ಷಾ ಪದ್ಧತಿಗಳಲ್ಲಿ ಪಾರದರ್ಶಕತೆ ಹೆಚ್ಚಿಸುವುದು ಹಾಗೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ 3 ರಿಂದ 5 ತಿಂಗಳೊಳಗೆ ಫಲಿತಾಂಶ ಪ್ರಕಟಿಸಿ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೆಚ್. ಪ್ರಸನ್ನ ಅವರು ವಿವರಿಸಿದರು.

ನೇಮಕಾತಿ ಪರೀಕ್ಷೆಗಳು ಪೂರ್ಣಗೊಂಡ ಕೂಡಲೇ ಆಯಾ ಜಿಲ್ಲೆಗಳಲ್ಲಿ ಲಭ್ಯವಿರುವ ಸ್ಕ್ಯಾನಿಂಗ್ ಯಂತ್ರಗಳ ಮೂಲಕ ಔಒಖ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ, ಆಯೋಗದ ಅಧಿಕೃತ ಅಂತರ್ಜಾಲ ತಾಣದಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದು. ಇದರಿಂದ ಅಭ್ಯರ್ಥಿಗಳು ತಮ್ಮ ಔಒಖ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಲು ಅನುಕೂಲವಾಗಲಿದೆ. ಅಲ್ಲದೆ, ಪರೀಕ್ಷೆ ಪೂರ್ಣಗೊಂಡ ಒಂದು ವಾರದೊಳಗೆ ಫಲಿತಾಂಶ ಪ್ರಕಟಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.



ಸಭೆಯಲ್ಲಿ ಆಯೋಗದ ಸದಸ್ಯರು ವಿವಿಧ ಸಲಹೆಗಳನ್ನು ನೀಡಿದ್ದು, ನೇಮಕಾತಿ ಪ್ರಕ್ರಿಯೆಗಳನ್ನು ಸಂಪೂರ್ಣ ಪಾರದರ್ಶಕವಾಗಿ ಹಾಗೂ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಸರ್ಕಾರಿ ಉದ್ಯೋಗದ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಯಾವುದೇ ವ್ಯಕ್ತಿಗಳು ನೀಡುವ ಆಮಿಷಗಳಿಗೆ ಒಳಗಾಗದೆ, ವದಂತಿಗಳಿಗೆ ಕಿವಿಗೊಡದೆ, ಅಧಿಕೃತ ಮಾಹಿತಿಯನ್ನು ಮಾತ್ರ ಅವಲಂಬಿಸುವಂತೆ ಆಯೋಗವು ಮನವಿ ಮಾಡಿದೆ. ಯಾವುದೇ ರೀತಿಯ ಮಧ್ಯವರ್ತಿಗಳ ಅಥವಾ ಅನಧಿಕೃತ ವ್ಯಕ್ತಿಗಳ ಭರವಸೆಗಳಿಗೆ ಬಲಿಯಾಗದೆ ಪರೀಕ್ಷೆಗಳಿಗೆ ಸಿದ್ಧತೆಗಳನ್ನು ಮಾಡಿಕೊಂಡು ಸರ್ಕಾರದ ನೇಮಕಾತಿ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

# ನಲಪಾಡ್‌ಗೆ ಎರಡನೇ ಮದುವೆ: 16ರಂದು ನಿಕಾಹ್

● ವಿಕ್ರಮ ವಾಹಿನಿ । ಬೆಂಗಳೂರು

ಶಾಂತಿನಗರ ಶಾಸಕ ಎನ್.ಎ. ಹ್ಯಾರಿಸ್ ಪುತ್ರ ಹಾಗೂ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರ ಎರಡನೇ ವಿವಾಹ ಕೊಡಗಿನಲ್ಲಿ ನಡೆಯಲಿದೆ. ಮಡಿಕೇರಿ ಹೊರವಲಯದ ಮೇಕೇರಿ ಗ್ರಾಮದ ಕೂರ್ಗ್ ವೈಲ್ಡರ್‌ನೆಟ್ ರೆಸಾರ್ಟ್‌ನಲ್ಲಿ ಆ.15ರಿಂದ 20ರವರೆಗೆ ವಿವಾಹ ಕಾರ್ಯಕ್ರಮಗಳು ನಡೆಯಲಿವೆ.

ಆ.16ರಂದು ಮಧ್ಯಾಹ್ನ 12ಕ್ಕೆ ಮಲಿಹಾ ಫಾತಿಮಾ ಅವರೊಂದಿಗೆ ನಿಕಾಹ್ ನಡೆಯಲಿದ್ದು, ಆ.17ರಂದು ಆರತಕ್ಷತೆ ಆಯೋಜಿಸಲಾಗಿದೆ. ಎರಡೂ ಕುಟುಂಬಗಳ ಆಪ್ತರು ಹಾಗೂ ಆಹ್ವಾನಿತ ಗಣ್ಯರು ಭಾಗವಹಿಸಲಿದ್ದಾರೆ.

2017ರಲ್ಲಿ ಸಮ್ರೀನ್ ಸೇಲಂ ಅವರನ್ನು ವಿವಾಹವಾಗಿದ್ದ ನಲಪಾಡ್, ಇದೀಗ ಕೊಡಗು ಜಿಲ್ಲಾ ಕಾಂಗ್ರೆಸ್ ಮುಖಂಡ ಎಸ್.ಐ. ಮುನೀರ್ ಅಹ್ಮದ್ ಅವರ ಪುತ್ರಿ ಮಲಿಹಾ ಫಾತಿಮಾ ಅವರನ್ನು ವಿವಾಹವಾಗುತ್ತಿದ್ದಾರೆ. ಕಾನೂನು ಪದವಿ ಪಡೆದಿರುವ ಮಲಿಹಾ, ಅಮೆರಿಕ ಮೂಲದ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗದಲ್ಲಿದ್ದಾರೆ.

ವಿವಾಹಕ್ಕಾಗಿ ರೆಸಾರ್ಟ್‌ನ 104 ಕೊಠಡಿಗಳನ್ನು ಕಾಯ್ದಿರಿಸಲಾಗಿದ್ದು, ಕಾರ್ಯಕ್ರಮದ ಅವಧಿಯಲ್ಲಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಟರಾದ ಸುದೀಪ್, ಯಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ.

ಮದುವೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇರಳ ಮುಖ್ಯಮಂತ್ರಿ ಸತೀಶನ್, ನಟರಾದ ಸುದೀಪ್ ಹಾಗೂ ಯಶ್ ಸೇರಿದಂತೆ ಹಲವು ಗಣ್ಯರಿಗೆ ಆಹ್ವಾನ ನೀಡಲಾಗಿದೆ. ಎರಡೂ ಕುಟುಂಬಗಳ ಸಮ್ಮತಿಯೊಂದಿಗೆ ವಿವಾಹ ನಿಶ್ಚಯವಾಗಿದ್ದು, ಖಾಸಗಿ ಕಾರ್ಯಕ್ರಮವಾಗಿ ಸಮಾರಂಭ ನಡೆಯಲಿದೆ.

# 'ರೈತರು, ಅಡಿಕೆ ಬೆಳೆಗಾರರ ಮೇಲೆ ಪ್ರಹಾರ'




**ರಾಜ್ಯ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಅವಕಾಶ ನೀಡದಿರುವುದನ್ನು ವಿರೋಧಿಸಿ ಶನಿವಾರದಂದು ಬಿಜೆಪಿ ಶಾಸಕ ಶಾಸಕಿಯರು ವಿಧಾನಸೌಧದ ಮಹಾತ್ಮ ಗಾಂಧೀಜಿ ಪುತ್ರಳಿ ಎದುರು ಕಾಂಗ್ರೆಸ್ ಸರ್ಕಾರದ ನೀತಿಯನ್ನು ಖಂಡಿಸಿ ಪ್ರತಿಭಟನೆ ನಡೆಸಿದರು**

● ವಿಕ್ರಮ ವಾಹಿನಿ । ಬೆಂಗಳೂರು

ಕಾಂಗ್ರೆಸ್ ಸರಕಾರ ಮತ್ತು ರಾಜ್ಯದ ಮುಖ್ಯಮಂತ್ರಿಗಳು ರೈತರು ಮತ್ತು ಅಡಿಕೆ ಬೆಳೆಗಾರರ ಮೇಲೆ ಗದಾಪ್ರಹಾರ ಮಾಡುವ ಪ್ರಯತ್ನ ಅಥವಾ ಷಡ್ಯಂತ್ರ ಮಾಡುತ್ತಿರುವ ಗುಮಾನಿ ರಾಜ್ಯದ ಅಡಿಕೆ ಬೆಳೆಗಾರರಲ್ಲಿ ಮೂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ವಿಧಾನಸೌಧದ ಬಿಜೆಪಿ ಕಚೇರಿ ಸಂಖ್ಯೆ 101ರಲ್ಲಿ ಇಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಕರಾವಳಿ, ಮಲೆನಾಡು ಭಾಗದಲ್ಲಿ ಅತಿ ಹೆಚ್ಚು ಅಡಿಕೆ ಬೆಳೆಯುತ್ತಾರೆ. ಇಡೀ ದೇಶದಲ್ಲಿ ಸುಮಾರು 9 ಲಕ್ಷದ 49 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತದೆ.

ಈ ಪೈಕಿ ಕರ್ನಾಟಕದಲ್ಲಿ 6 ಲಕ್ಷ 76 ಸಾವಿರದ 940 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯುತ್ತಾರೆ ಎಂದು ಗಮನ ಸೆಳೆದರು. ಕರ್ನಾಟಕದಲ್ಲಿ ಈ ಬೆಳೆಯನ್ನು ಶೇ 76ರಷ್ಟು ಬೆಳೆಯಲಾಗುತ್ತದೆ ಎಂದು ತಿಳಿಸಿದರು.

ಇದೆಲ್ಲ ಮಾಹಿತಿ ಇದ್ದರೂ ಗುಟ್ಕಾ ನಿಷೇಧ ಮಾಡುವುದಾಗಿ ಹಾವು ಬಿಡುವ ಕೆಲಸ ಸರಕಾರದಿಂದ ಆಗಿದೆ ಎಂದು ಟೀಕಿಸಿದರು. ಅಡಿಕೆ ಬೆಳೆಗಾರರಲ್ಲಿ ಭಯ ಹುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಕ್ಯಾಂಪ್ಕೋ, ಇತರ ಸಂಘಗಳ ನಿಯೋಗ ಬರಲಿದ್ದು, ಸೋಮವಾರ ಅಥವಾ ಮಂಗಳವಾರ ಸಭೆ ನಿಗದಿ ಮಾಡಲು ಕೋರಿದ್ದೇನೆ ಎಂದು ಹೇಳಿದರು.

ಮಾಜಿ ಗೃಹ ಸಚಿವ ಮತ್ತು ಶಾಸಕ ಅರಗ ಜ್ಞಾನೇಂದ್ರ ಅವರು ಮಾತನಾಡಿ, 145 ತಾಲ್ಲೂಕುಗಳಲ್ಲಿ ಅಡಿಕೆ ಬೆಳೆಯಲಾಗುತ್ತದೆ. 10 ಲಕ್ಷಕ್ಕಿಂತ ಹೆಚ್ಚು ರೈತ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿದೆ ಎಂದು ವಿವರಿಸಿದರು. ಗುಟ್ಕಾ ಮತ್ತು ಪಾನ್ ಮಸಾಲಾ ನಿಷೇಧ ಕುರಿತ ಅಧಿಸೂಚನೆಯಿಂದ ಅಡಿಕೆ ಬೆಲೆ ಕುಸಿದಿದೆ ಎಂದು ಹೇಳಿದರು.

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481
ಸತ್ಯದ ಹಾದಿ | ಜನಪರ ದನಿ | ರಾಷ್ಟ್ರೀಯ ದೃಷ್ಟಿ
ವಿಕ್ರಮ ವಾಹಿನಿ

# ‘224 ಶಾಸಕರೂ ನನಗೆ ಒಂದೇ, ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡುವೆ’

● ವಿಕ್ರಮ ವಾಹಿನಿ | ಬೆಂಗಳೂರು



**ರಾಜ್ಯದ ಅಭಿವೃದ್ಧಿಗಾಗಿ ಆಡಳಿತ ಮತ್ತು ಪ್ರತಿಪಕ್ಷದ ಎಲ್ಲ 224 ಶಾಸಕರನ್ನೂ ವಿಶ್ವಾಸಕ್ಕೆ ಪಡೆದು ‘ಟೀಮ್ ಕರ್ನಾಟಕ’ವಾಗಿ ಕೆಲಸ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡಿದರು. ಬೆಂಗಳೂರು ಹೊರತಾಗಿ 2 ಮತ್ತು 3ನೇ ಹಂತದ ನಗರಗಳ ಅಭಿವೃದ್ಧಿ, ನೀರಿನ ಸಂರಕ್ಷಣೆ, ರೈತರ ಕಲ್ಯಾಣ, ಗ್ರಾಮೀಣ ಶಿಕ್ಷಣ ಹಾಗೂ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವುದಾಗಿ ಅವರು ತಿಳಿಸಿದರು. ಅಧಿಕಾರದಲ್ಲಿ ಹೆಚ್ಚು ಸ್ನೇಹಿತರನ್ನು ಗಳಿಸುವುದೇ ತಮ್ಮ ಉದ್ದೇಶ ಎಂದರು.**

ಪಕ್ಷಭೇದ ಮರೆತು ರಾಜ್ಯದ ಅಭಿವೃದ್ಧಿಗಾಗಿ ಎಲ್ಲ 224 ಶಾಸಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ‘ಟೀಮ್ ಕರ್ನಾಟಕ’ ಆಗಿ ಕೆಲಸ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿ ಕರೆ ನೀಡಿದರು. ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಸದನಕ್ಕೆ ಪರಿಚಯಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಜನರು ನೀಡಿದ ತೀರ್ಪನ್ನು ಗೌರವಿಸಬೇಕು. ತಮ್ಮ ದೃಷ್ಟಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲ ಶಾಸಕರೂ ಸಮಾನರು. ರಾಜ್ಯದ ಹಿತಕ್ಕಾಗಿ ಎಲ್ಲರ ಸಹಕಾರ ಪಡೆದು ಮುನ್ನಡೆಯುವುದು ತಮ್ಮ ಉದ್ದೇಶ ಎಂದರು.

ಹಿಂದಿನ ಮುಖ್ಯಮಂತ್ರಿಗಳು ಹಾಗೂ ಸರ್ಕಾರಗಳು ರಾಜ್ಯದ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿದ ಶಿವಕುಮಾರ್, ಬೆಂಗಳೂರು ಮಾತ್ರವಲ್ಲದೆ 2ನೇ ಮತ್ತು 3ನೇ ಹಂತದ ನಗರಗಳನ್ನೂ ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದರು. ನೀರಾವರಿ ಯೋಜನೆಗಳಿಗೆ ಆದ್ಯತೆ, ಮುಂದಿನ 25 ವರ್ಷಗಳಲ್ಲಿ ಕರ್ನಾಟಕವನ್ನು ಹಸಿರು ರಾಜ್ಯವನ್ನಾಗಿ ಮಾಡುವುದು, ನೀರಿನ ಸಂರಕ್ಷಣೆ ಹಾಗೂ ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆಗೆ ಉತ್ತೇಜನ ನೀಡುವುದು ಸರ್ಕಾರದ ಪ್ರಮುಖ ಗುರಿಗಳಾಗಿವೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕಾಗಿ ನಿಧಿ ಬಳಸುವ ಮೂಲಕ ನಗರಗಳಿಗೆ ವಲಸೆ ತಡೆಯಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವುದು, ಪೊಲೀಸ್ ವ್ಯವಸ್ಥೆ ಬಲಪಡಿಸುವುದು ಹಾಗೂ ಕಂದಾಯ ಇಲಾಖೆಯಲ್ಲಿ ಇ–ಖಾತಾ, ಬಿ–ಟು–ಎ ಖಾತಾ ಸೇರಿದಂತೆ ಸುಧಾರಣೆಗಳನ್ನು ಮುಂದುವರಿಸಲಾಗುವುದು ಎಂದು ತಿಳಿಸಿದರು.

ವಿರೋಧ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸರ್ಕಾರ ಕೆಲಸ ಮಾಡಲು ಸಾಧ್ಯವಿಲ್ಲ. ಯಾರ ಮೇಲೂ ಅಧಿಕಾರ ದುರುಪಯೋಗಪಡಿಸಿಕೊಳ್ಳುವ ಉದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದ ಅವರು, “ನಾನು ಹೆಚ್ಚು ಸ್ನೇಹಿತರನ್ನು ಗಳಿಸಲು ಬಯಸುತ್ತೇನೆ, ಶತ್ರುಗಳನ್ನು ಅಲ್ಲ” ಎಂದರು.

ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಸಹಕಾರ ಪಡೆದು ರಾಜ್ಯಕ್ಕೆ ಹೆಚ್ಚಿನ ಯೋಜನೆ ಮತ್ತು ಉದ್ಯೋಗ ತರಲು ಸರ್ಕಾರ ಸಿದ್ಧವಿದೆ ಎಂದರು. ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಉದ್ಯೋಗ ಸೃಷ್ಟಿಸಲು ಮುಂದಾದರೆ ಅಗತ್ಯ ಜಾಗ ಒದಗಿಸಲು ಸರ್ಕಾರ ಸಿದ್ಧವಿದೆ ಎಂದು ಶಿವಕುಮಾರ್ ಹೇಳಿದರು. ನೂತನ ವಿಧಾನಸಭಾ ಸ್ಪೀಕರ್ ಜಿ.ಎಸ್. ಪಾಟೀಲ್ ಅವರಿಗೆ ಅಭಿನಂದನೆ ಸಲ್ಲಿಸಿದ ಮುಖ್ಯಮಂತ್ರಿ, ಅವರು ಆಡಳಿತ ಪಕ್ಷದ ಮಾತ್ರವಲ್ಲದೆ ಎಲ್ಲ ಶಾಸಕರ ಧ್ವನಿಗೂ ಸಮಾನ ಅವಕಾಶ ನೀಡಿ, ಸದನದ ಘನತೆ ಕಾಪಾಡಬೇಕು ಎಂದು ಆಶಿಸಿದರು. ಹಿರಿಯ ನಾಯಕ ಟಿ.ಬಿ. ಜಯಚಂದ್ರ ಹಾಗೂ ಮಾಜಿ ಸ್ಪೀಕರ್ ಯು.ಟಿ. ಖಾದರ್ ಅವರ ಸೇವೆಯನ್ನೂ ಇದೇ ವೇಳೆ ಸ್ಮರಿಸಿದರು.

## ಎಂಡಿಎಸ್ ಪ್ರವೇಶ: ಆ.17 ಅರ್ಜಿ ಸಲ್ಲಿಸಲು ಕೊನೆ ದಿನ

● ವಿಕ್ರಮ ವಾಹಿನಿ | ಬೆಂಗಳೂರು

ಸ್ನಾತಕೋತ್ತರ ದಂತ ವೈದ್ಯಕೀಯ ಪದವಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್ ಸೈಟ್ ನಲ್ಲಿ ಲಿಂಕ್ ಬಿಡುಗಡೆ ಮಾಡಿದೆ.

ಎಂಡಿಎಸ್ ನೀಟ್ ಪರೀಕ್ಷೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕ ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದಿರುವವರು ನೋಂದಣಿ ಮಾಡಿಕೊಂಡು ಆಗಸ್ಟ್ 17ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಶುಲ್ಕ ಪಾವತಿಸಲು ಆ. 18 ಕೊನೆ ದಿನ. ಹೆಚ್ಚಿನ ವಿವರಗಳಿಗೆ ಕೆಇಎ ವೆಬ್ ಸೈಟ್ ನೋಡಲು ಅವರು ಸಲಹೆ ನೀಡಿದ್ದಾರೆ.

## ಬಿಪಿಎಲ್ ಪರಿಷ್ಕರಣೆ ತಾತ್ಕಾಲಿಕ ಸ್ಥಗಿತ: ರಿಜ್ವಾನ್ ಅರ್ಷದ್

● ವಿಕ್ರಮ ವಾಹಿನಿ | ಬೆಂಗಳೂರು

ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಆಹಾರ ಸಚಿವ ರಿಜ್ವಾನ್ ಅರ್ಷದ್ ತಿಳಿಸಿದ್ದಾರೆ.

ಆಹಾರ ಇಲಾಖೆ ಪ್ರಗತಿ ಪರಿಶೀಲನಾ ಸಭೆ ಬಳಿಕ ಮಾತನಾಡಿದ ಅವರು, ಸದ್ಯ ಯಾವುದೇ ಬಿಪಿಎಲ್ ಕಾರ್ಡ್‌ಗಳನ್ನು ಡಿಲೀಟ್ ಮಾಡದಂತೆ ಸೂಚಿಸಲಾಗಿದೆ. ತಾಂತ್ರಿಕ ಕಾರಣಗಳಿಂದ ಕಾರ್ಡ್‌ಗಳು ರದ್ದಾಗಿದ್ದರೆ ಪರಿಶೀಲಿಸಿ ಮರುನೀಡಲಾಗುವುದು ಎಂದರು.

ಕೇಂದ್ರದ ನಿರ್ದೇಶನದಂತೆ ಸೆಪ್ಟೆಂಬರ್ 30ರೊಳಗೆ 2.65 ಕೋಟಿ ಫಲಾನುಭವಿಗಳ ಇ–ಕೆವೈಸಿ ಪೂರ್ಣಗೊಳಿಸಲಾಗುವುದು. ಇ–ಕೆವೈಸಿ ಮಾಡಿಸದ ಕಾರ್ಡ್‌ಗಳನ್ನು ರದ್ದುಗೊಳಿಸಿ, ಅರ್ಹ ಹೊಸ ಫಲಾನುಭವಿಗಳಿಗೆ ಕಾರ್ಡ್ ನೀಡುವ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇ–ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಎಷ್ಟು ಕಾರ್ಡ್‌ಗಳು ಅರ್ಹವಾಗಿವೆ ಎಂಬುದು ಸ್ಪಷ್ಟವಾಗಲಿದೆ. ಅನರ್ಹ ಕಾರ್ಡ್‌ಗಳನ್ನು ತೆರವುಗೊಳಿಸಿದ ನಂತರ ಆ ಸ್ಥಾನಕ್ಕೆ ಅರ್ಹ ಫಲಾನುಭವಿಗಳಿಗೆ ಹೊಸ ಕಾರ್ಡ್ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಅನ್ನಭಾಗ್ಯ ಯೋಜನೆಯಡಿ ಬಡವರಿಗೆ ಆಹಾರ ಭದ್ರತೆ ಒದಗಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಇಲಾಖೆಯ ಕಾರ್ಯವೈಖರಿಯನ್ನು ಮತ್ತಷ್ಟು ಸುಧಾರಿಸಿ, ಅರ್ಹ ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಪಡಿತರ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದರು.

## ಅಂಡಮಾನ್‌ನ ಸಮುದ್ರದಲ್ಲಿ ಅತಿ ದೊಡ್ಡ ತ್ರಿವರ್ಣ ಧ್ವಜ ಅನಾವರಣ

● ವಿಕ್ರಮ ವಾಹಿನಿ | ಬೆಂಗಳೂರು



ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸ್ವರಾಜ್ ದ್ವೀಪ್‌ನಲ್ಲಿ ಸಮುದ್ರದ ನೀರಿನಲ್ಲಿ ಅತಿ ದೊಡ್ಡ ರಾಷ್ಟ್ರಧ್ವಜ ಹಾರಿಸುವ ಮೂಲಕ ಐತಿಹಾಸಿಕ ಸಾಧನೆಯಲ್ಲಿ ಭಾಗಿಯಾದ ಬೆಂಗಳೂರಿನ ಶರತ್ ಅಶೋಕ ಅವರನ್ನು ಅಂಡಮಾನ್ ನಿಕೋಬಾರ್‌ನ ಲೆಫ್ಟಿನೆಂಟ್ ಗವರ್ನರ್ ಅಡ್ಮಿರಲ್ ಡಿ.ಕೆ.ಜೋಶಿ ಸನ್ಮಾನಿಸಿದರು.

2026 ರ ಮೇ 2 ರಂದು ಅಂಡಮಾನ್–ನಿಕೋಬಾರ್‌ನ ಸ್ವರಾಜ್ ದ್ವೀಪದ (ಹ್ಯಾವ್ಲಾಕ್ ದ್ವೀಪ) ಬಳಿ ಸುಮಾರು 200 ಸ್ಕೂಬಾ ಡೈವರ್‌ಗಳು ಭಾರತದ ತ್ರಿವರ್ಣ ಧ್ವಜವನ್ನು ಹೊತ್ತೊಯ್ದು ಅದನ್ನು ಸಮುದ್ರದ ನೀರಿನೊಳಗಿಟ್ಟು ಅನಾವರಣ ಮಾಡಿದ್ದರು. 60ಥ40 ಮೀಟರ್ (2,400 ಚದರ ಮೀಟರ್) ವಿಸ್ತೀರ್ಣದ ಈ ಧ್ವಜವನ್ನು ಭಾರತೀಯ ನೌಕಾಪಡೆ, ಕರಾವಳಿ ಕಾವಲು ಪಡೆ, ಪೊಲೀಸರು ಹಾಗೂ ಅರಣ್ಯ ಪಡೆಯ ನೆರವಿನೊಂದಿಗೆ ಡೈವರ್‌ಗಳು ಸಮುದ್ರಕ್ಕೆ ಹೊತ್ತೊಯ್ದಿದ್ದರು. ಈ ಮೂಲಕ ದೇಶದಲ್ಲೇ ಮೊದಲ ಬಾರಿಗೆ ಬೃಹತ್ ಧ್ವಜವನ್ನು ಸಮುದ್ರದ ನೀರಿನಲ್ಲಿ ಪ್ರದರ್ಶನ ಮಾಡಿದ ದಾಖಲೆ ಸೃಷ್ಟಿಯಾಯಿತು.


ಈ ಕುರಿತು ಸಂತಸ ವ್ಯಕ್ತಪಡಿಸಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ಶರತ್‌ನ ತಂದೆಯಾಗಿ ನನಗೆ ಈ ಬಗ್ಗೆ ಬಹಳ ಹೆಮ್ಮೆ ಉಂಟಾಗಿದ್ದು, ಇದು ಅತ್ಯಂತ ಭಾವುಕ ಕ್ಷಣವಾಗಿದೆ. ನನ್ನ ಮಗ ಸ್ವರಾಜ್ ದ್ವೀಪದಲ್ಲಿ ಅತಿ ದೊಡ್ಡ ರಾಷ್ಟ್ರಧ್ವಜವನ್ನು ಅನಾವರಣ ಮಾಡುವ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಅದು ಗಿನ್ನೆಸ್ ವಿಶ್ವ ದಾಖಲೆಗೆ ಸೇರಿರುವುದು ಹಾಗೂ ಲೋಕ ನಿವಾಸದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ಆಡಳಿತದಿಂದ ಸನ್ಮಾನ ಪಡೆದಿರುವುದು ಹೆಮ್ಮೆಯ ಸಂಗತಿ.

ಸಾಗರದಲ್ಲಿ ನಮ್ಮ ತ್ರಿವರ್ಣ ಧ್ವಜವನ್ನು ಹಾರಿಸಲು ಮತ್ತು ಗಿನ್ನೆಸ್ ವಿಶ್ವ ದಾಖಲೆ ಮಾಡಲು ನನ್ನ ಮಗ ಹಾಗೂ ಇಡೀ ತಂಡದವರು ಅಸಾಧಾರಣ ಧೈರ್ಯ, ಸಮರ್ಪಣೆ, ಶಿಸ್ತು ಮತ್ತು ಶ್ರಮ ವಹಿಸಿದ್ದರು ಎಂದು ಶ್ಲಾಘಿಸಿದ್ದಾರೆ. ನನ್ನ ಮಗ ರಾಷ್ಟ್ರಕ್ಕೆ ಹೆಮ್ಮೆ ತರುವ ಸಾಧನೆಗೆ ಕೊಡುಗೆ ನೀಡಿರುವುದನ್ನು ನೋಡುವುದು ಎಂದರೆ ಅದು ಪದಗಳಲ್ಲಿ ವ್ಯಕ್ತಪಡಿಸಲಾಗದ ಭಾವನೆಯಾಗಿದೆ ಎಂದು ಅವರು ಸಂತಸ ಹಂಚಿಕೊಂಡಿದ್ದಾರೆ.

## ಸಭಾಪತಿ ಪೀಠ ಪಕ್ಷಾತೀತ: ರವಿಕುಮಾರ್

● ವಿಕ್ರಮ ವಾಹಿನಿ | ಬೆಂಗಳೂರು

ವಿಧಾನ ಪರಿಷತ್ತಿನ ನೂತನ ಸಭಾಪತಿಯಾಗಿ ಆಯ್ಕೆಯಾಗಿರುವ ಸಲೀಂ ಅಹ್ಮದ್ ಅವರಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅಭಿನಂದನೆ ಸಲ್ಲಿಸಿದರು.



ಸಭಾಪತಿ ಪೀಠ ಯಾವುದೇ ಪಕ್ಷಕ್ಕೆ ಸೇರಿದ್ದಲ್ಲ, ಅದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಪವಿತ್ರ ಸ್ಥಾನ. ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರಿಗೆ ಸಮಾನ ಅವಕಾಶ ನೀಡಿ, ಸದನದ ಘನತೆ ಮತ್ತು ಸಂಸದೀಯ ಪರಂಪರೆ ಕಾಪಾಡುವ ಜವಾಬ್ದಾರಿ ಸಭಾಪತಿಗಳ ಮೇಲಿದೆ ಎಂದು ಹೇಳಿದರು.

ಸಭಾಪತಿ ಪೀಠದ ಮೇಲಿರುವ ‘ಗಂಡಭೇರುಂಡ’ದ ಎರಡು ತಲೆಗಳನ್ನು ಉಲ್ಲೇಖಿಸಿದ ರವಿಕುಮಾರ್, ಆಡಳಿತ ಮತ್ತು ವಿರೋಧ ಪಕ್ಷಗಳು ಸದನದ ಎರಡು ಭಾಗಗಳಿದ್ದಂತೆ. ಎರಡೂ ಕಡೆಯವರಿಗೆ ಸಮಾನ ನ್ಯಾಯ, ಅವಕಾಶ ನೀಡಿದಾಗ ಮಾತ್ರ ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ ಎಂದರು.

ಸಲೀಂ ಅಹ್ಮದ್ ಅವರು ಪಕ್ಷಾತೀತವಾಗಿ ಕಾರ್ಯನಿರ್ವಹಿಸಿ, ಉಭಯ ಪಕ್ಷಗಳಿಗೂ ನ್ಯಾಯ ಒದಗಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಅವರು ಹೇಳಿದರು.

## ಬೆಂಗಳೂರಿನಲ್ಲಿ ಶ್ರೀ ಬಗಲಾಮುಖಿ ದೇವಿ ಮಹಾ ಕುಂಭಾಭಿಷೇಕಕ್ಕೆ ಭಕ್ತರ ದಂಡು

● ವಿಕ್ರಮ ವಾಹಿನಿ | ಬೆಂಗಳೂರು



ಶ್ರೀ ಮಹಾ ವಿದ್ಯಾ ಪೀಠವು ಇಂದು ಬೆಂಗಳೂರಿನ ಬುಕ್ಕಸಾಗರದಲ್ಲಿ ನೂತನವಾಗಿ ಸ್ಥಾಪಿಸಲಾದ ಶ್ರೀ ಬಗಲಾಮುಖಿ ದೇವಿ ದೇವಾಲಯದ 'ಅಷ್ಟಬಂಧನ ಮಹಾ ಕುಂಭಾಭಿಷೇಕ'ವನ್ನು ನೆರವೇರಿಸಿತು.

ಈ ದೇವಾಲಯದಲ್ಲಿ ವಿಶ್ವದ ಅತಿದೊಡ್ಡ ಶ್ರೀ ಬಗಲಾಮುಖಿ ದೇವಿ ವಿಗ್ರಹ (7 ಅಡಿ 3 ಇಂಚು ಎತ್ತರ ಮತ್ತು 1.2 ಟನ್ ತೂಕ) ಇದೆ ಎಂದು ನಂಬಲಾಗಿದೆ. ಹೀಗಾಗಿ, ಈ ಪ್ರತಿಷ್ಠಾಪನಾ ಸಮಾರಂಭವು ಮಹಾವಿದ್ಯಾ ಸಂಪ್ರದಾಯದ ಭಕ್ತರು ಮತ್ತು ಸಾಧಕರಿಗೆ ಅತ್ಯಂತ ಮಹತ್ವದ ಸಂದರ್ಭವಾಗಿದೆ.

ಶ್ರೀ ಬಗಲಾಮುಖಿಯು ಶಾಕ್ತ ಸಂಪ್ರದಾಯದ 'ದಶ ಮಹಾವಿದ್ಯೆ'ಗಳಲ್ಲಿ (ಹತ್ತು ಮಹಾನ್ ಜ್ಞಾನ ದೇವತೆಗಳಲ್ಲಿ) ಒಬ್ಬರು. ಆಕೆಯು 'ಸ್ತಂಭನ' ಶಕ್ತಿಯ ಸಾಕಾರರೂಪವಾಗಿದ್ದಾಳೆ – ಅಂದರೆ, ತೊಂದರೆದಾಯಕ ಶಕ್ತಿಗಳನ್ನು ನಿಶ್ಚಲಗೊಳಿಸುವ, ನಿಯಂತ್ರಿಸುವ ಮತ್ತು ಹತೋಟಿಗೆ ತರುವ ಶಕ್ತಿ. ಆಕೆಯ ಆರಾಧನೆಯು ಸಾಂಪ್ರದಾಯಿಕವಾಗಿ ರಕ್ಷಣೆ, ವಿಪತ್ತುಗಳು ಹಾಗೂ ನಕಾರಾತ್ಮಕ ಪ್ರಭಾವಗಳನ್ನು ಜಯಿಸುವುದು ಮತ್ತು ಸ್ಪಷ್ಟತೆ, ಧೈರ್ಯ ಹಾಗೂ ಆಂತರಿಕ ಶಕ್ತಿಯನ್ನು ಬೆಳೆಸಿಕೊಳ್ಳುವುದರೊಂದಿಗೆ ಸಂಬಂಧಿಸಿದೆ.

ಮಹಾವಿದ್ಯೆಯ ಆಳವಾದ ದೃಷ್ಟಿಕೋನದಿಂದ ನೋಡಿದಾಗ, ಆಕೆಯ ಶಕ್ತಿಯು ಆಂತರಿಕವಾಗಿಯೂ ಕಾರ್ಯನಿರ್ವಹಿಸುತ್ತದೆ; ಅಂದರೆ ಅನಿಯಂತ್ರಿತ ಮಾತು, ಕೋಪ, ಭಯ ಮತ್ತು ಚಂಚಲ ಮನಸ್ಸನ್ನು ಶಾಂತಗೊಳಿಸುವತ್ತ ಇದು ಕೇಂದ್ರೀಕೃತವಾಗಿರುತ್ತದೆ.

ಪ್ರಾಣ ಪ್ರತಿಷ್ಠಾಪನೆ, ಮಂತ್ರ ಪಠಣ, ಹೋಮ, ಅಭಿಷೇಕ ಮತ್ತು ಅಷ್ಟಬಂಧನ ವಿಧಿಗಳ ಮೂಲಕ ನಡೆಯುವ ಪವಿತ್ರ ಪ್ರತಿಷ್ಠಾಪನಾ ಪ್ರಕ್ರಿಯೆಯ ಪರಾಕಾಷ್ಠೆಯನ್ನು ಈ ಮಹಾ ಕುಂಭಾಭಿಷೇಕವು ಸೂಚಿಸುತ್ತದೆ. ಮಹಾವಿದ್ಯಾ ಸಂಪ್ರದಾಯದಲ್ಲಿ, ಇದು ಕೇವಲ ದೇವಾಲಯದ ಉದ್ಘಾಟನೆಯಲ್ಲ; ಬದಲಾಗಿ ದೇವಿ ದರ್ಶನ, ಆರಾಧನೆ, ಸಾಧನೆ ಮತ್ತು ಆಧ್ಯಾತ್ಮಿಕ ಪರಿವರ್ತನೆಗಾಗಿ ಒಂದು ಪವಿತ್ರ ಸ್ಥಳದ ಸ್ಥಾಪನೆಯಾಗಿದೆ.

ಶ್ರೀ ಸದ್ಗುರುದೇವ್, ನಮ್ಮ ಗುರು ಪರಂಪರೆ ಮತ್ತು ಶ್ರೀ ಬಗಲಾಮುಖಿ ದೇವಿಯ ಆಶೀರ್ವಾದದಿಂದ, ಈ ಪವಿತ್ರ ದೇವಾಲಯವನ್ನು ಸ್ಥಾಪಿಸುವ ಸೌಭಾಗ್ಯ ನಮಗೆ ಲಭಿಸಿದೆ.

## ಆರ್‌ಎಸ್‌ಎಸ್ ವಿರುದ್ಧ ಪ್ರಿಯಾಂಕ್ ಖರ್ಗೆ ವಾಗ್ದಾಳಿ

● ವಿಕ್ರಮ ವಾಹಿನಿ | ಬೆಂಗಳೂರು

"ಸಾರ್ವಜನಿಕ ಸ್ಥಳಗಳ ಬಳಕೆಗೆ ಕಾನೂನು, ನಿಯಮಗಳನ್ನು ಪಾಲನೆ ಮಾಡಬೇಕು" ಎಂದರೆ ಬಿಜೆಪಿಯವರು ಇದು ಆರ್.ಎಸ್.ಎಸ್ ಗೆ ಹೇಳಿರುವುದು ಎಂದು ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ಕುಂಬಳಕಾಯಿ ಕದ್ದವರಿಗೆ ಮಾತ್ರ ಹೆಗಲು ಮುಟ್ಟಿ ನೋಡಿಕೊಳ್ಳುವಂತಹ ಆತಂಕವಿರುತ್ತದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಆರ್.ಎಸ್.ಎಸ್ ಎದುರು ಹಾಕಿಕೊಂಡರೆ ನೀವು ಮನೆಯಿಂದ ಆಚೆ ಬರಲು ಆಗುವುದಿಲ್ಲ" ಎಂದಿದ್ದಾರೆ. ಈ ಬೆದರಿಕೆ ಮಾತುಗಳ ಹಿಂದಿನ ಅರ್ಥವೇನು? ಆರ್.ಎಸ್.ಎಸ್ ಭಯೋತ್ಪಾದಕ ಸಂಘಟನೆಯೇ? ಪ್ರಶ್ನಿಸಿದವರನ್ನು ಮುಗಿಸುವ ಅಂಡರ್ ವರ್ಲ್ಡ್ ಮಾಫಿಯಾದವರೇ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಇಂತಹ ಬೆದರಿಕೆ ಹಾಕುತ್ತಿದ್ದಾರೆಂದರೆ ಆರ್.ಎಸ್.ಎಸ್ ಕ್ರಿಮಿನಲ್ ಗಳ ಸಮೂಹ ಇರಬಹುದೇ ಅಶೋಕ್ ಅವರೇ? ಎಂದು ಪ್ರಶ್ನಿಸಿರುವ ಅವರು, ನಾನು ಮನೆಯಿಂದ ಆಚೆ ಬರುವುದಕ್ಕೆ ಸಂವಿಧಾನದ ರಕ್ಷಣೆ ಇದೆ, ನಾನು ಮುಕ್ತವಾಗಿ ಮಾತನಾಡುವುದಕ್ಕೆ ಬಾಬಾ ಸಾಹೇಬರು ನೀಡಿದ ನೈತಿಕ ಧೈರ್ಯವಿದೆ.

ನಿಮ್ಮ ಆರ್.ಎಸ್.ಎಸ್ ನ ಗೊಡ್ಡು ದೊಣ್ಣೆಗಳಿಗೆ ಹೆದರುವುದಕ್ಕೆ ನನ್ನಲ್ಲಿ ಹರಿಯುತ್ತಿರುವುದು ಸಾವರ್ಕರ್ ರಕ್ತವಲ್ಲ, ನಮ್ಮದು ಅಂಬೇಡ್ಕರ್ ರಕ್ತ. ಅಂಬೇಡ್ಕರ್ ಧೈರ್ಯವನ್ನು ನೀಡಿದ್ದಾರೆಯೇ ಹೊರತು ಭಯವನ್ನಲ್ಲ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

## ರಾಷ್ಟ್ರಪತಿ ಪೊಲೀಸ್ ಪದಕಕ್ಕೆ ಷಣ್ಮುಗ ವರ್ಮ

● ವಿಕ್ರಮ ವಾಹಿನಿ | ಮೈಸೂರು

ದೇಶದ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕೇಂದ್ರ ಗೃಹ ಸಚಿವಾಲಯ ಘೋಷಿಸಿರುವ ಪ್ರತಿಷ್ಠಿತ **‘ರಾಷ್ಟ್ರಪತಿ ಪೊಲೀಸ್ ಪದಕ–2026’**ಕ್ಕೆ ಪೊಲೀಸ್ ತರಬೇತಿ ಶಾಲೆ, ಮೈಸೂರಿನ ಆರಕ್ಷಕ ನಿರೀಕ್ಷಕ ಷಣ್ಮುಗ ವರ್ಮ ಆಯ್ಕೆಯಾಗಿದ್ದಾರೆ.



ಪ್ರಸ್ತುತ ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವರು, ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಸಾವಯವ ಕೃಷಿಕರಾದ ಕೆ. ಕುಪ್ಪರಾಜು ಮತ್ತು ಎನ್.ಕೆ. ಜಯಮ್ಮ ದಂಪತಿಯ ಪುತ್ರ. ಬೆಂಗಳೂರಿನ ಪ್ರತಿಷ್ಠಿತ ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಷಣ್ಮುಗ ವರ್ಮ, ಪೊಲೀಸ್ ಇಲಾಖೆಯಲ್ಲಿ ಸಲ್ಲಿಸಿದ ಅತ್ಯುತ್ತಮ ಸೇವೆಗಾಗಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಗೌರವವು ಷಣ್ಮುಗ ವರ್ಮ ಅವರ ಪೊಲೀಸ್ ಸೇವಾ ಬದ್ಧತೆ ಹಾಗೂ ಕರ್ತವ್ಯನಿಷ್ಠೆಗೆ ಸಂದಿರುವ ಪ್ರತಿಷ್ಠಿತ ಮಾನ್ಯತೆಯಾಗಿದೆ.

## ಮಹಿಳಾ ಪ್ರಾತಿನಿಧ್ಯಕ್ಕೆ ಕತ್ತರಿ: ವಿಜಯೇಂದ್ರ

● ವಿಕ್ರಮ ವಾಹಿನಿ | ಬೆಂಗಳೂರು

ರಾಜ್ಯ ಸಚಿವ ಸಂಪುಟದಲ್ಲಿ ಒಬ್ಬರೂ ಮಹಿಳೆಗೆ ಸ್ಥಾನ ನೀಡದಿರುವುದನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಖಂಡಿಸಿದ್ದಾರೆ. ತಾಯಿ ಭುವನೇಶ್ವರಿ ಪ್ರತಿಮೆ ಮುಂದೆ ಬಿಜೆಪಿ ಶಾಸಕರು ಹಾಗೂ ಪರಿಷತ್ ಸದಸ್ಯರು ನಡೆಸಿದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಮಹಿಳಾ ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು. ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ಸಚಿವರಿಲ್ಲದೆ ವಿಧಾನಮಂಡಲ ಅಧಿವೇಶನ ನಡೆಯುತ್ತಿದೆ ಎಂದು ಟೀಕಿಸಿದರು.



ಆರ್‌ಎಸ್‌ಎಸ್ ವಿಚಾರದಲ್ಲಿ ಸವಾಲು: ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸರ್ಕಾರ ಹಿಂಬಾಗಿಲಿನಿಂದ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ವಿಜಯೇಂದ್ರ, ಧೈರ್ಯವಿದ್ದರೆ ಆರ್‌ಎಸ್‌ಎಸ್ ನಿಷೇಧಿಸುವ ಪ್ರಯತ್ನ ಮಾಡಿ ಎಂದು ಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಸವಾಲು ಹಾಕಿದರು. ಸಂಘಟನೆ ವಿರುದ್ಧ ಯಾವುದೇ ದೇಶವಿರೋಧಿ ಚಟುವಟಿಕೆ ನಡೆದಿರುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದರು.


ನಾಗೇಂದ್ರ ಸೇರ್ಪಡೆಗೆ ವಿರೋಧ: ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಮಾಜಿ ಸಚಿವ ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿರುವುದನ್ನೂ ಅವರು ವಿರೋಧಿಸಿದರು. ಆರೋಪಗಳಿಂದ ಮುಕ್ತರಾಗುವವರೆಗೆ ಸಚಿವರನ್ನಾಗಿ ಮಾಡಬಾರದು. ಇದು ಜಾತಿ ವಿರೋಧವಲ್ಲ, ಭ್ರಷ್ಟಾಚಾರದ ವಿರುದ್ಧದ ನಿಲುವು ಎಂದು ಸ್ಪಷ್ಟಪಡಿಸಿದರು. ವಾಲ್ಮೀಕಿ ಸಮುದಾಯದ ಮುಖಂಡರ ಅಸಮಾಧಾನದ ಹಿನ್ನೆಲೆಯಲ್ಲಿ ಮುಂದಿನ ಹೋರಾಟದ ಬಗ್ಗೆ ಚರ್ಚಿಸಲಾಗುವುದು ಎಂದರು.

ಜಮೀರ್‌ಗೆ ಜವಾಬ್ದಾರಿ ನೆನಪು: ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಹಿಂದೆ ಸರಿದಿರುವ ಜಮೀರ್ ಅಹಮದ್ ಅವರ ನಿರ್ಧಾರವನ್ನೂ ವಿಜಯೇಂದ್ರ ಟೀಕಿಸಿದರು. ಪಕ್ಷ ಸಂಘಟನೆ ಹಾಗೂ ಉಪಚುನಾವಣೆ ಕಾರಣ ನೀಡಿ ಸರ್ಕಾರಿ ಜವಾಬ್ದಾರಿಯಿಂದ ಹಿಂದೆ ಸರಿಯುವುದು ಸರಿಯಲ್ಲ. “ಲಾಭ ಬೇಕು, ಹೊಣೆಗಾರಿಕೆ ಬೇಡ” ಎಂಬ ಮನೋಭಾವ ಜನಪ್ರತಿನಿಧಿಗಳಿಗೆ ಇರಬಾರದು ಎಂದು ಹೇಳಿದರು.

## ವಿಬಿಜಿ ರಾಮ್ ಜಿ 15 ದಿನದಲ್ಲಿ ಕೂಲಿ ಹಣ ಪಾವತಿಸದಿದ್ದರೆ ಕ್ರಮ: ಈಶ್ವರ ಖಂಡ್ರೆ

● ವಿಕ್ರಮ ವಾಹಿನಿ | ಬೆಂಗಳೂರು

ಗ್ರಾಮೀಣ ಉದ್ಯೋಗ ಖಾತ್ರಿ ವಿಬಿಜಿ ರಾಮ್ ಜಿ ಅಡಿ ಕೆಲಸ ಮಾಡಿದವರಿಗೆ 15 ದಿನವಾದರೂ ಕೂಲಿ ಹಣ ಪಾವತಿಯಾಗದಿದ್ದರೆ, ಸಂಬಂಧಿತ ಪಿಡಿಓಗಳನ್ನೇ ಹೊಣೆ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಎಚ್ಚರಿಕೆ ನೀಡಿದ್ದಾರೆ.



ವಿಕಾಸಸೌಧದಲ್ಲಿಂದು ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಜಿಲ್ಲಾಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಗ್ರಾಮೀಣ ಭಾಗದಲ್ಲಿ ಖಾಸಗಿ ಕೆಲಸ ಮಾಡುವ ಕೂಲಿಯಾಳುಗಳಿಗೆ ದೈನಂದಿನ ಆಧಾರದಲ್ಲಿ ಇಲ್ಲವೇ ವಾರಕ್ಕೆ ಒಮ್ಮೆ ಕೂಲಿ ಹಣ ಪಾವತಿ ಆಗುತ್ತದೆ.

ಆದರೆ ವಿಬಿಜಿ ರಾಮ ಜಿ ಅಡಿ 15–20 ದಿನವಾದರೂ ಹಣ ಬಾರದಿದ್ದರೆ ಜನ ಕೆಲಸಕ್ಕೆ ಬರುವುದಿಲ್ಲ. ಕನಿಷ್ಠ 7 ಗರಿಷ್ಠ 10 ದಿನಗಳ ಒಳಗೆ ಕೂಲಿ ಹಣ ಪಾವತಿಯಾಗುವಂತೆ ಕ್ರಮ ವಹಿಸಿ ಎಂದು ತಿಳಿಸಿದರು.

ಕಷ್ಟಪಟ್ಟು ಕೂಲಿ ಮಾಡಿದವರಿಗೆ ನಿಗದಿತ ಕಾಲಮಿತಿಯಲ್ಲಿ ಕೂಲಿ ನೀಡದಿರುವುದು ಅಪರಾಧ ಎಂದು ಬಣ್ಣಿಸಿದ ಈಶ್ವರ ಖಂಡ್ರೆ, ಚಾಮರಾಜನಗರ ಜಿಲ್ಲೆಯಲ್ಲಿ ಪಿಡಿಓಗಳ ಲಾಗಿನ್ ನಲ್ಲಿಯೇ ಇನ್ನೂ 57 ಲಕ್ಷ ರೂ. ಕಾಮಗಾರಿಯ ಕೂಲಿ ಪೆಂಡಿಂಗ್ ಇದೆ. ಕೂಡಲೇ ಈ ಎಲ್ಲ ಕೂಲಿ ಹಣ ಪಾವತಿಗೆ ಕ್ರಮ ಕೈಗೊಳ್ಳಿ ಎಂದು ಸಿಇಓಗೆ ಸೂಚನೆ ನೀಡಿದರು.

ಬೋಗಸ್ ಬಿಲ್ ಮತ್ತು ಕಳಪೆ ಕಾಮಗಾರಿಗೆ ಅವಕಾಶ ಇಲ್ಲ. ಇಂತಹ ದೂರುಗಳು ಬಂದರೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ ಈಶ್ವರ ಖಂಡ್ರೆ, ಗಡಿ ಜಿಲ್ಲೆ ಚಾಮರಾಜನಗರದಿಂದ ಯಾರೂ ಉದ್ಯೋಗ ಅರಸಿ ಗುಳೆ ಹೋಗದಂತೆ ಇರುವಲ್ಲಿಯೇ ಉದ್ಯೋಗ ನೀಡಬೇಕು, ಗುಣಮಟ್ಟದ ಶಾಶ್ವತ ಆಸ್ತಿ ನಿರ್ಮಾಣ ಮಾಡಬೇಕು ಎಂದರು.

## ಬೆಲೆಬಾಳುವ ಅಕ್ಕಿಗಿಂತ ಆಯುರ್ವೇದದಲ್ಲಿ ತಿಳಿಸಿರುವ ‘ಶಾಷ್ಟಿಕ’, ‘ರಕ್ತಶಾಲಿ’ ಅಕ್ಕಿಗಳೇ ಶ್ರೇಷ್ಠ

● ವಿಕ್ರಮ ವಾಹಿನಿ | ಗೋಕರ್ಣ




ಶರೀರವು ತ್ರಿಮೂರ್ತಿಗಳಿಂದ ಆವೃತವಾಗಿದ್ದು, ಬ್ರಹ್ಮ – ವಿಷ್ಣು – ರುದ್ರರೇ ಕ್ರಮವಾಗಿ ವಾತ – ಕಫ ಹಾಗೂ ಪಿತ್ತ ರೂಪದಲ್ಲಿ ನೆಲೆನಿಂತಿದ್ದಾರೆ. ಶರೀರವು ತ್ರಿಮೂರ್ತಿಮಯವಾಗಿದ್ದು, ವಾತ, ಪಿತ್ತ ಮತ್ತು ಕಫಗಳಿಂದಲೇ ಶರೀರ ಕಾರ್ಯಾಚರಿಸುತ್ತಿದೆ. ಜಠರಾಗ್ನಿ ಕೇವಲ ಆಹಾರವನ್ನು ಜೀರ್ಣಿಸುವ ಶಕ್ತಿಯಲ್ಲ. ಅದು ದೈವಿಕ ಶಕ್ತಿಯ ಪ್ರತೀಕ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ 14.08.2026 ರಂದು 'ಅನ್ನಂ ಬ್ರಹ್ಮ' ಮಾಲಿಕೆಯಲ್ಲಿ 'ಜಠರಾಗ್ನಿ'ಯ ಕುರಿತಾಗಿ ಪ್ರವಚನ ಅನುಗ್ರಹಿಸಿದ ಶ್ರೀಗಳು, ಹಸಿವು ಎಂಬುದು ಸಾಕ್ಷಾತ್ ಪರಮಾತ್ಮನೇ ಆಗಿದ್ದು, ಜಠರಾಗ್ನಿಯು ಪಿತ್ತರೂಪದಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಅದರ ಮೂಲ ಸ್ವರೂಪ ದೈವಿಕವಾಗಿದೆ. ಜಠರಾಗ್ನಿಯು ಜೀವಶಕ್ತಿಯ ಕೇಂದ್ರವಾಗಿದ್ದು, ಈ ಕುರಿತಾಗಿ ಶ್ರುತಿಸ್ಮೃತಿಗಳ ಉಲ್ಲೇಖಗಳಿವೆ. ಸುಶ್ರುತ ಹಾಗೂ ಚರಕ ಮಹರ್ಷಿಗಳ ಆಯುರ್ವೇದ ಗ್ರಂಥಗಳಲ್ಲಿಯೂ ಈ ಕುರಿತಾಗಿ ವಿಮರ್ಶೆಗಳು ನಡೆದಿದ್ದು, ಅಗ್ನಿ ಹಾಗೂ ಪಿತ್ತ ಇವೆರಡರ ಕುರಿತಾದ ಸುದೀರ್ಘ ವಿಮರ್ಶೆಯೂ ಇದ್ದು, ಪಿತ್ತವೆಂದರೆ ಶಿವ ಎಂದು ಪ್ರತಿಪಾದಿತವಾಗಿದೆ. ಇದು ಜಠರಾಗ್ನಿಯ ಮಹತ್ವ ಹಾಗೂ ಅದಕ್ಕಿರುವ ಆಧ್ಯಾತ್ಮಿಕತೆಯನ್ನು ತಿಳಿಸುತ್ತದೆ ಎಂದರು.

ಏನು ತಿನ್ನುತ್ತೇವೆ? ಎಂಬಷ್ಟೇ ಪ್ರಾಮುಖ್ಯತೆಯು ತಿನ್ನುವ ಸಮಯದ ಭಾವ – ಭಂಗಿ ಹಾಗೂ ಸ್ಥಳಗಳಿಗೂ ಮಹತ್ವವಿದ್ದು, ಊಡಾದುತ್ತಾ ತಿನ್ನುವುದು, ನಿಂತುಕೊಂದು ಆಹಾರ ಹಾಗೂ ಪಾನೀಯವನ್ನು ಸ್ವೀಕರಿಸಿದರೆ ಅದು ರಾಕ್ಷಸರಿಗೆ ಸಲ್ಲುತ್ತದೆ ಎಂದು ಹೇಳಲಾಗಿದ್ದು, ಕ್ರಮಬದ್ಧವಾಗಿ ಕುಳಿತುಕೊಂಡು ಆಹಾರ ಸ್ವೀಕರಿಸಿದರೆ ಸತ್ವಗುಣ ವೃದ್ಧಿಯಿಂದಾಗಿ ಆ ಆಹಾರವು ದೇವತೆಗಳಿಗೆ ಸಲ್ಲುತ್ತದೆ ಎಂದು ಹೇಳಲಾಗಿದ್ದು, ಸತ್ವ – ರಜಸ್ಸು ಹಾಗೂ ತಮೋ ಗುಣಗಳ ಹಿನ್ನೆಲೆಯ ಸಂಶೋಧನೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. ಸಾತ್ವಿಕ ಆಹಾರವೇ ಆದರೂ, ಅಶುಚಿಯಾದ ಸ್ಥಳದಲ್ಲಿ ಸೇವಿಸಿದರೆ ಅದು ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡುತ್ತದೆ ಎಂದು ಹೇಳಿದರು.

ಯಾವ ಅಕ್ಕಿ ಶ್ರೇಷ್ಠ? : ಬೆಲೆ ಹೆಚ್ಚಿರುವ ಅಕ್ಕಿಗಳೆಲ್ಲಾ ಶ್ರೇಷ್ಠವೆಂದೇನಲ್ಲ. ಬಾಸುಮತಿ ಅಕ್ಕಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯಿದೆ. ಆ ಕಾರಣಕ್ಕೆ ಅದೇ ಶ್ರೇಷ್ಠ ಎಂದು ಹೇಳಲಾಗದು. ಶಾಷ್ಟಿಕ, ರಕ್ತಶಾಲಿ ಅಕ್ಕಿಗಳನ್ನು ಆಯುರ್ವೇದವು ಶ್ರೇಷ್ಠ ಎಂದು ಹೇಳಿದೆ. ಜನರಿಗೆ ಅವುಗಳ ನಿಜವಾದ ಮೌಲ್ಯ ತಿಳಿದಿಲ್ಲ. ನಿಜವಾಗಿ ಯಾವುದು ಪ್ರಶಸ್ತವೋ ಅದನ್ನು ಶ್ರೇಷ್ಠವೆಂದು ಪರಿಗಣಿಸಿ ಸ್ವೀಕರಿಸಬೇಕು ಎಂದು ತಿಳಿಸಿದರು.

ಬೆಂಗಳೂರಿನ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀಶ್ರೀ ಡಾ॥ ಆರೂಢ ಭಾರತಿ ಸ್ವಾಮಿಗಳು ಗೋಕರ್ಣದ ಅಶೋಕೆಗೆ ಭೇಟಿನೀಡಿ, ಶ್ರೀಗಳನ್ನು ಸಂದರ್ಶಿಸಿದರು. ಆಹಾರದ ಕುರಿತಾಗಿ ಭಾರತೀಯ ಚಿಂತನೆಯ ಹಿನ್ನೆಲೆಯಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಕುರಿತಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481
vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 139,